ಶಾಸ್ತ್ರ ಪರಿಚಯ ಗ್ರಂಥಮಾಲಾ-೨

# ಭಾರತೀಯ ಧರ್ಮ ದರ್ಶನ



ಲೇಖಕರು

ಮೀಮಾಂಸಾ-ಸಾಹಿತ್ಯ-ಧರ್ಮಶಾಸ್ತ್ರ-ಜ್ಯೋತಿಷ ವಿದ್ವಾನ್

**ಕೆ. ವಾಸುದೇವ ಸೋಮಯಾಜೀ**

ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯ ಧರ್ಮಶಾಸ್ತ್ರ ಪ್ರಾಧ್ಯಾಪಕರು

ಪ್ರಕಾಶಕರು

**ಶತಮಾನೋತ್ಸವ ಸಮಿತಿ**

**ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲಾ**

ಮೈಸೂರು-೫೭೦ ೦೦೪

ಶಾಸ್ತ್ರ ಪರಿಚಯ ಗ್ರಂಥಮಾಲಾ–೨

# ಭಾರತೀಯ ಧರ್ಮ ದರ್ಶನ

ಲೇಖಕರು

ಮೀಮಾಂಸಾ-ಸಾಹಿತ್ಯ-ಧರ್ಮಶಾಸ್ತ್ರ-ಜ್ಯೌತಿಷ ವಿದ್ವಾನ್

**ಕೆ. ವಾಸುದೇವ ಸೋಮಯಾಜೀ**

ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯ ಧರ್ಮಶಾಸ್ತ್ರ ಪ್ರಾಧ್ಯಾಪಕರು

ಪ್ರಕಾಶಕರು

**ಶತಮಾನೋತ್ಸವ ಸಮಿತಿ**

**ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲಾ**

ಮೈಸೂರು–೫೭೦ ೦೦೪

ಶಾಸ್ತ್ರ ಪರಿಚಯ ಗ್ರಂಥಮಾಲಾ-೨

ಪ್ರಥಮ ಮುದ್ರಣ: ೧೯೭೬

ಪುಟಗಳು: ೨೪; ೫.೦೦ ಪ್ರತಿಗಳು

ಎಲ್ಲ ಹಕ್ಕುಗಳು ಲೇಖಕರಿಗೆ ಸೇರಿದುದು

ಬೆಲೆ: ೫೦ ಪೈಸೆ

ಪ್ರಕಾಶಕರು

**ಶತಮಾನೋತ್ಸವ ಸಮಿತಿ**

ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲಾ

ಮೈಸೂರು-೫೭೦ ೦೦೪

ಮುದ್ರಕರು

ಮಿತ್ರ ಪ್ರಿಂಟರ್ಸ್, ಮೈಸೂರು-೮.

# ಮುನ್ನುಡಿ

ಸಂಸ್ಕೃತಭಾಷೆ ದೇವಭಾಷೆ. ವಿಶ್ವಮಾನ್ಯವಾದ ಸಂಸ್ಕೃತ ಸಾಹಿತ್ಯದ ಸುಮಧುರ ಫಲ ಭಾರತೀಯ ಸಂಸ್ಕೃತಿ. ನಮ್ಮ ಸಂಸ್ಕೃತಿಯ ಸಾರಸರ್ವಸ್ವವನ್ನರುಹುವ ಕೃತಿಗಳೇ, ವೇದ ಶಾಸ್ತ್ರ ಆಗಮಾದಿಗಳು. ಈ ದೇವವಾಣಿ ಎಂಬ ದೇವಗಂಗೆಯ ಪವಿತ್ರಜಲದಲ್ಲಿ ಮಿಂದು ಪವಿತ್ರರಾಗುವ ಭಾಗ್ಯ ಕೆಲವರಿಗೆ ಮಾತ್ರ ಮೀಸಲಾಗಿರದೆ ಸರ್ವರಿಗೂ ಸುಲಭವಾಗಿ ಲಭಿಸಬೇಕೆಂಬುದೇ ನಮ್ಮ ಈ ಶಾಸ್ತ್ರ ಪರಿಚಯ ಗ್ರಂಥಮಾಲೆಯ ಮುಖ್ಯಗುರಿ.

ನಮ್ಮ ಮಹಾಪಾಠಶಾಲೆಯ ಧರ್ಮಶಾಸ್ತ್ರ ಪ್ರಾಧ್ಯಾಪಕರಾದ, ನಾಲ್ಕಾರು ಶಾಸ್ತ್ರಗಳಲ್ಲಿ ಆಳವಾದ ಪರಿಚಯವುಳ್ಳ, ಧರ್ಮಶಾಸ್ತ್ರದ ಬಗ್ಗೆ ಅಧಿಕಾರವಾಣಿಯಿಂದ ಹೇಳಬಲ್ಲ ಶ್ರೀ ಕೆ. ವಾಸುದೇವ ಸೋಮಯಾಜಿಗಳು ಅತ್ಯಲ್ಪ ಸಮಯದಲ್ಲಿ ಧರ್ಮಶಾಸ್ತ್ರ ಸಾರಸರ್ವಸ್ವವನ್ನು ಕರಿಯ ಕನ್ನಡಿಯೊಳಗಡಗಿಸಿದಂತೆ ಈ ಕಿರುಹೊತ್ತಿಗೆಯಲ್ಲಿ ಬರೆದಿದ್ದಾರೆ; ವಿಷಯವನ್ನಡಗಿಸಿದ್ದಾರೆ. ಅವರಿಗೆ ನಾನು ಕೃತಜ್ಞ. ಈ ಗ್ರಂಥಮಾಲೆಯು ಇತೋತ್ಯತಿಶಯವಾಗಿ ಬೆಳಗಲಿ.

ಪ್ರಕಾಶನದ ಔದಾರ್ಯವನ್ನು ತೋರಿದ ಶತಮಾನೋತ್ಸವ ಸಮಿತಿಗೆ ನಾನು ಆಭಾರಿಯಾಗಿದ್ದೇನೆ.

ಸಂಸ್ಕೃತ ಸಾಹಿತ್ಯಕ್ಕೆ ನಾವು ಸಲ್ಲಿಸುತ್ತಿರುವ ಅಳಿಲು ಸೇವೆಯನ್ನು ಸಹೃದಯರು ಸ್ವೀಕರಿಸಿ, ಕೃಪೆಮಾಡಿ ಸಲಹೆಗಳನ್ನು ನೀಡಬೇಕಾಗಿ ಸವಿನಯ ವಿಜ್ಞಾಪನೆ.

ಮೈಸೂರು — **ಪಿ. ಎಸ್. ರಾಜಶೇಖರಯ್ಯ**

೧೦–೧೨–೧೯೭೫ — ಪ್ರಿನ್ಸಿಪಾಲ್

॥ ಶ್ರೀ ॥

। ಧರ್ಮೋ ರಕ್ಷತಿ ರಕ್ಷಿತಃ ।

# ಭಾರತೀಯ ಧರ್ಮ ದರ್ಶನ

ಪ್ರತಿಯೊಬ್ಬ ಮಾನವನು ತನಗೆ ಸುಖ ದೊರೆಯಲೆಂದು ಸ್ವಲ್ಪವೂ ಕಷ್ಟವಾಗಬಾರದೆಂದು ಬಯಸುವುದು ಸ್ವಾಭಾವಿಕವಾದರೂ ಈ ವಿಷಯವಾಗಿ ಸ್ವಲ್ಪವೂ ಯೋಚಿಸದಿರುವುದು ಮನಸ್ಸಿಗೆ ಖೇದವನ್ನುಂಟುಮಾಡುತ್ತದೆ. ವಿಶ್ವದಲ್ಲಿ ಇಂದು ಭಾರತೀಯರಿಗೆ ಸ್ವಲ್ಪವಾದರೂ ಮನ್ನಣೆ ಇರುವುದಾದರೆ ಅದು ತಾನು ಅನುಸರಿಸಿಕೊಂಡು ಬಂದಿರುವ ಧರ್ಮದ ವಾ ಸಂಸ್ಕೃತಿಯ ಪ್ರಭಾವದಿಂದ ಹೊರತು ವಿಜ್ಞಾನದ ಅಥವಾ ಇತರ ಸಂಪತ್ತಿನ ಬಲದಿಂದಲ್ಲ ವೆನ್ನುವುದು ಎಲ್ಲರಿಗೂ ತಿಳಿದೇ ಇದೆ. ಹಾಗೆಯೇ ಮಾನವನು ಯೋಗ್ಯವಾದ ತನ್ನ ಪ್ರಯತ್ನದಿಂದ ಸುಖವನ್ನು ಪಡೆಯಬೇಕೇ ಹೊರತು ಪ್ರಯತ್ನವನ್ನೇ ಮಾಡದೆ ಸುಖ ದೊರೆಯಲಿಲ್ಲವೆಂದು ಪೇಚಾಡುವುದರಿಂದೇನೂ ಲಾಭವಾಗದು. ಅಂತಯೇ ಕಷ್ಟಬರಬಾರದೆಂದು ಎಲ್ಲರೂ ಬಯಸುವರಾದರೂ ಕಷ್ಟಕ್ಕೆ ಕಾರಣ ವಾದ ಪಾಪಕಾರ್ಯವನ್ನು ಎಡೆಬಿಡದೆ ಮಾಡುತ್ತಲೇ ಇರುವರು. ಬೆಂಕಿಯನ್ನು ಮುಟ್ಟಿದ ನಂತರ ಸುಡದಿದ್ದೀತೆ ?

ಆದ್ದರಿಂದ ಸಕಲ ಮಾನವರಿಗೂ ಸುಖವು ಹೇಗೆ ದೊರೆತೀತು ? ದುಃಖ ವನ್ನು ಹೇಗೆ ತಪ್ಪಿಸಬಹುದು ಎಂಬುದನ್ನು ವಿವೇಚಿಸುವುದೇ ಈ ಲೇಖನದ ಉದ್ದೇಶ.

ಮಾನವರ ಇಹ ಪರಗಳ ಸುಖಕ್ಕೆ ಸಾಧನವಾವುದೆಂದು ವಿವೇಚಿಸಹೊರ ಟಾಗ ನಮ್ಮ ಕಣ್ಣಮುಂದೇ ಗೋಚರಿಸುವುದು ಧರ್ಮ ಮಾತ್ರ. ಇನ್ನಾವ ವಸ್ತುವು ಒಮ್ಮೊಮ್ಮೆ ಸುಖಕರವೆಂದು ಕಂಡರೂ ಯಾವಾಗಲೂ ಸುಖವ ನ್ನುಂಟುಮಾಡಲಾರದು. ದುಃಖವನ್ನುಂಟು ಮಾಡುವುದೂ ಕಂಡು ಬಂದಿದೆ. ಉದಾಹರಣೆಗೆ ಹೇಳುವುದಾದರೆ ಮೃಷ್ಟಾನ್ನ ಭೋಜನದಿಂದ ಯಾವಾಗಲೂ ಎಲ್ಲರಿಗೂ ಸುಖವೇ ಉಂಟಾಗುತ್ತದೆ ಎನ್ನುವ ಭರವಸೆ ಇಲ್ಲ. ಅದು ಅಜೀರ್ಣ

ವನ್ನುಂಟುಮಾಡುವುದಲ್ಲದೇ ಕೆಲವೊಮ್ಮೆ ಜ್ವರವೊದಲಾದ ಸ್ಥಿತಿಯಲ್ಲಿ ಮರಣ ವನ್ನೇ ಉಂಟುಮಾಡುವುದು. ಆದ್ದರಿಂದ ತ್ರಿಕಾಲದಲ್ಲೂ ಮಾನವನ ಸುಖ ಸಾಧನ ಧರ್ಮ ಮಾತ್ರ. ಈ ಭಾರತೀಯ ಧರ್ಮವನ್ನೇ ಕೆಲವರು ಭಾರತೀಯ ಸಂಸ್ಕೃತಿ ಎಂದು ಕರೆಯುವರು. ಯಾಕೆಂದರೆ ಸಂಪೂರ್ವಕವಾದ "ಕೃಞ" ಧಾತುವಿಗೆ ಭೂಷಣಾರ್ಥದಲ್ಲಿ ಕಿ ಪ್ರತ್ಯಯ ಬಂದಿದೆ. ಅಂದರೆ ಯಾವುದ ರಿಂದ ಮಾನವನ ಆತ್ಮವು ಇಹ ಪರ ಶ್ರೇಯಸ್ಸನ್ನು ಪಡೆಯುವ ಮೂಲಕ ಅಲಂಕರಿಸಲ್ಪಡುತ್ತದೋ ಅದೇ ಸಂಸ್ಕೃತಿ ವಾ ಆಚಾರ ವಾ ಧರ್ಮ.

ಆದರೆ ಈ ಸಂಸ್ಕೃತಿಯ ತಿರುಳನ್ನು ತಿಳಿದವರೆಷ್ಟು ಮಂದಿ! ಎಷ್ಟೋ ಜನರು ವಿದೇಶಕ್ಕೆ ತೆರಳಿ ಅಲ್ಲಿಯವರ ಪ್ರಶ್ನೆಗಳಿಗೆ ಉತ್ತರ ಹೇಳಲಾರದೆ ಪೆಚ್ಚು ತನವನ್ನು ತೋರಿಸಿಕೊಂಡದ್ದನ್ನು ಕೇಳಿದ್ದೇವೆ. ಆದರೂ ಈ ಬಗ್ಗಾಗಿ ಜನರ ಗಮನ ಇತ್ತ ಹರಿಯುತ್ತಿಲ್ಲ. ನಮ್ಮ ಧರ್ಮದ ಬಗ್ಗೆ ಪಾಶ್ಚಾತ್ಯರಿಂದ ತಿಳಿದು ಕೊಳ್ಳಬೇಕಾದ ದುಃಸ್ಥಿತಿಗೆ ಬಂದಿದ್ದೇವೆ. ಇದಕ್ಕೆ ಕಾರಣವನ್ನು ಹುಡುಕ ಹೊರಟಾಗ ವಿದ್ಯಾಭ್ಯಾಸದ ಕ್ರಮದಲ್ಲಿಯೇ ನ್ಯೂನತೆ ಕಂಡುಬರುತ್ತದೆ. ಬಾಲ್ಯ ದಲ್ಲಿ ಮಕ್ಕಳ ಮನಸ್ಸಿನ ಮೇಲೆ ಉಪದೇಶ ಪರಿಣಾಮ ಬೀರುವಂತೆ ವಯಸ್ಸಾದ ನಂತರ ಪರಿಣಾಮ ಬೀರದೆಂಬುದು ಅನುಭವಸಿದ್ಧವಾದುದು. ಆದ್ದರಿಂದ ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಭಾರತೀಯ ಸಂಸ್ಕೃತಿಯ ಪರಿಚಯ ಸ್ವಲ್ಪವಾದರೂ ಮಕ್ಕಳಿಗಾಗುವಂತೆ ಯೋಚಿಸುವುದು ಯೋಗ್ಯ. ಈ ದಿಶೆ ಯಲ್ಲಿ ಇಂದಿನ ಶಿಕ್ಷಣವೇತ್ತರ ಗಮನಹರಿಯುವುದು ಒಳಿತು.

ವಿಶ್ವದ ಅನೇಕ ಧರ್ಮಗಳಲ್ಲಿ ಭಾರತೀಯ ಧರ್ಮವು ಉತ್ಕೃಷ್ಟ ವಾದುದು ಯಾಕೆಂದರೆ ಇತರ ಧರ್ಮಗಳು ಬೇರೆಯವರನ್ನು ತಮ್ಮ ಕಡೆ ಸೆಳೆಯಲು ಅನೇಕ ರೀತಿಯ ಪ್ರಲೋಭನೆಗಳನ್ನ ಅಜ್ಞ ಜನತೆಯ ಮುಂದಿಡು ತ್ತವೆ. ಆದರೆ ಭಾರತೀಯ ಧರ್ಮವು ಇದಕ್ಕೆ ವಿರುದ್ಧವಾಗಿ "ಸ್ವಧರ್ಮ ದಲ್ಲೇ ಶ್ರೇಯಸ್ಸನ್ನು ಕಾಣಿರಿ, ಸಂಪೂರ್ಣವಾಗಿ ಆಚರಿಸುವ ಪರಧರ್ಮಕ್ಕಿಂತ ಅಲ್ಪವಾದರೂ ತನ್ನ ಧರ್ಮವೇ ಶ್ರೇಷ್ಠ ಆದ್ದರಿಂದ ನಿಮ್ಮ ಧರ್ಮದಲ್ಲೇ ನೀವು ಇರಿ" ಎಂದು ಸಾರುತ್ತದೆ.

**ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್**
**ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ||**

ಆದರೆ ನಮಗೆ ನಮ್ಮ ಧರ್ಮದಲ್ಲಿ ಪೂಜ್ಯಭಾವವಿರಬೇಕು. ತಾಯಿಯನ್ನು ತಾಯಿಯೆನ್ನಲು ಅವಮಾನವೆ? ನಾವೇ ನಮ್ಮ ಧರ್ಮವನ್ನು ಹಳಿದರೆ ಇದು ಆತ್ಮದ್ರೋಹವಲ್ಲವೆ? ಮತ್ತು ಭಾರತೀಯ ಧರ್ಮವು ಇತರ ಧರ್ಮಗಳನ್ನು ದ್ವೇಷಿಸಲು ಹೇಳುವುದೂ ಇಲ್ಲ. ಇದಕ್ಕೆ ಪ್ರತಿಯಾಗಿ ಪರೋಪಕಾರದಿಂದಪುಣ್ಯವೆಂದೂ, ಪರಪೀಡೆಯಿಂದ ಪಾಪವೆಂದೂ, ತನಗೆ ಪ್ರತಿಕೂಲವಾದುದನ್ನು ಇತರರಿಗೆ ಮಾಡಬಾರದೆಂದೂ ಬೋಧಿಸುತ್ತದೆ.

**ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಮ್**
**ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್ ॥**

ಇಂತಹ ಉದಾತ್ತ ಧ್ಯೇಯವುಳ್ಳ ಧರ್ಮವು ವಿಶ್ವದಲ್ಲಿ ಬೇರೊಂದು ದೊರೆತೀತೆ? ಭಾರತೀಯರೆಂದರೆ ವೇದ, ಸ್ಮೃತಿ ಮೊದಲಾದ ಗ್ರಂಥಗಳನ್ನು ಪ್ರಮಾಣವೆಂದು ಒಪ್ಪಿದವರು. ಯಾರು ಶ್ರುತಿ, ಸ್ಮೃತಿ, ಪುರಾಣ, ಇತಿಹಾಸಗಳಲ್ಲಿ ಹೇಳಲ್ಪಟ್ಟ ಕರ್ಮಗಳ ಅನುಷ್ಠಾನದಿಂದ ಇಹ ಪರ ಶ್ರೇಯಸ್ಸನ್ನು ಸಂಪಾದಿಸಿಕೊಳ್ಳುವರೋ ಅವರೇ ಭಾರತೀಯರು, ಅಥವಾ ಶ್ರುತಿ, ಸ್ಮೃತಿಗಳ ಮೂಲಕ ಸಮಾಜ ವ್ಯವಸ್ಥೆ, ಅರ್ಥ ವ್ಯವಸ್ಥೆ, ಶಾಸನ ವ್ಯವಸ್ಥೆ, ಧರ್ಮ ವ್ಯವಸ್ಥೆಗಳ ಸಹಾಯದಿಂದ ಜೀವನದ ಸಮಸ್ತ ಕ್ಷೇತ್ರಗಳಲ್ಲಿ ಐಹಿಕ ಮತ್ತು ಪಾರತ್ರಿಕ ಅಭ್ಯುದಯದ ಸಂಪಾದನೆಯಲ್ಲಿ ವಿಶ್ವಾಸವಿರುವವರು ಭಾರತೀಯರು. ಲೋಕಮಾನ್ಯ ತಿಲಕರ ಅಭಿಪ್ರಾಯದಂತೆ ವೇದಗಳಲ್ಲಿ ಪ್ರಾಮಾಣ್ಯ ಬುದ್ಧಿಯುಳ್ಳವರೂ, ನಾನಾವಿಧದ ನಿಯಮಗಳನ್ನು ಪಾಲಿಸುವವರೂ, ಅನೇಕ ರೀತಿಯಲ್ಲಿ, ಈಶ್ವರ ಉಪಾಸನೆ ಮಾಡುವವರೂ ಹಿಂದೂ ಅಥವಾ ಭಾರತೀಯರು. ಮಾಧವ ದಿಗ್ವಿಜಯದಲ್ಲಿ ಓಂಕಾರವನ್ನು ಮೂಲಮಂತ್ರವಾಗಿಟ್ಟುಕೊಂಡಿರುವವರೂ, ಪುನರ್ಜನ್ಮದಲ್ಲಿ ವಿಶ್ವಾಸ, ಗೋವಿನಲ್ಲಿ ಶ್ರದ್ಧೆ ಉಳ್ಳವರು, ಭಾರತವೇ ಮೂಲವಾಗಿಉಳ್ಳವರು ಹಿಂದುಗಳು ಅಥವಾ ಭಾರತೀಯರು ಎಂದು ಹೇಳಿದೆ. ಸ್ಮೃತಿಗಳ ಅಭಿಪ್ರಾಯಗಳನ್ನು ಗಮನಿಸುವಾಗಲೂ, ಅಹಿಂಸಾಪರನೂ, ಸದಾಚಾರ ಸಂಪನ್ನನೂ ವೇದ ಗೋವುಗಳನ್ನು ಮಾನ್ಯ ಮಾಡುವವನೂ ಹಿಂದು ಎನ್ನುವುದಾಗಿ ತಿಳಿದುಬರುತ್ತದೆ. ಇಂತಹ ಭಾರತೀಯರಿಗೆ ಮೂಲಭೂತವಾದ ಧರ್ಮದ ಸ್ವರೂಪವೇನೆಂದು ವಿಚಾರಿಸೋಣ.

ಶ್ರುತಿಯಲ್ಲಿ "ಯಜ್ಞೇನ ಯಜ್ಞಮಯಜಂತ" ಇತ್ಯಾದಿ ವಚನಗಳಿವೆ. ಈ ವಚನಗಳನ್ನು ವಿಮರ್ಶಿಸುವಾಗ ಯಜ್ಞಯಾಗಾದಿಗಳೇ ಧರ್ಮವೆಂದು ತೋರುತ್ತದೆ. ಜೈಮಿನಿಗಳೂ ಕೂಡ ವಿಧಿಗಳಿಂದ ವಿಧಿಸಲ್ಪಡುವುದಾಗಿ, ಶ್ರೇಯಸ್ಕರವಾಗಿಯೂ, ಅನಿಷ್ಟವನ್ನುಂಡುಮಾಡದಿರುವುದೇ ಧರ್ಮವೆಂದಿದ್ದಾರೆ. ಇವರ ಅಭಿಪ್ರಾಯದಲ್ಲಿ ಸ್ವರ್ಗಾದಿ ಶ್ರೇಯಸ್ಸಿಗೆ ಕಾರಣವಾದ ದ್ರವ್ಯ, ಗುಣ, ಕ್ರಿಯೆ ಎಲ್ಲವೂ ಧರ್ಮವೇ. ಮತ್ತೆ ಕೆಲವರು ಶಾಸ್ತ್ರೀಯ ಕರ್ಮಾನುಷ್ಠಾನದಿಂದ ಆತ್ಮದಲ್ಲಿ ಉಂಟಾಗುವ ಸಂಸ್ಕಾರ ಯಾ ಅದೃಷ್ಟವನ್ನು ಧರ್ಮವೆನ್ನುವರು, ಸ್ಮೃತಿಕಾರನಾದ ಮನುವೂ ಕೂಡ ಶ್ರೇಯಸ್ಕರವಾದ ಆತ್ಮಸಂತೋಷವನ್ನೀಯುವ ದ್ವೇಷ ರಾಗ ರಹಿತರಾದ ವಿದ್ವಾಂಸರಿಂದ ಸೇವಿಸಲ್ಪಡುವುದೇ ಧರ್ಮವೆಂದಿದ್ದಾನೆ.

**ವಿದ್ವದ್ಭಿಃ ಸೇವಿತಃ ಸದ್ಭಿಃ ನಿತ್ಯಮದ್ವೇಷ ರಾಗಿಭಿಃ ।**
**ಹೃದಯೇನಾಭ್ಯನುಜ್ಞಾತೋ ಯೋಧರ್ಮಸ್ತ ನ್ನಿಬೋಧತ ॥**

ಆಪಸ್ತಂಬರೂ ಕೂಡ ಧರ್ಮ ಅಥವಾ ಅಧರ್ಮವು ಪ್ರತ್ಯಕ್ಷವಾಗಿ ಕಾಣಿಸಿಕೊಂಡು ನಾವು ಧರ್ಮ, ಅಧರ್ಮ ಎಂದು ಹೇಳಿಕೊಳ್ಳುವುದಿಲ್ಲ. ದೇವತೆಗಳೂ, ಗಂಧರ್ವರೂ, ಪಿತೃಗಳೂ ಬಂದು ಧರ್ಮಾಧರ್ಮಗಳನ್ನು ತೋರಿಸುವುದಿಲ್ಲ. ಶಿಷ್ಟರು ಅನುಮೋದಿಸುವುದೇ ಧರ್ಮ, ತೆಗಳುವುದೇ ಅಧರ್ಮ ಎಂದಿದ್ದಾರೆ. ಆದ್ದರಿಂದಲೇ ಹಿಂದೆ ಶಿಷ್ಟಾಚಾರವೂ ಧರ್ಮವೂ ಒಂದೇ ಎಂದು ಹೇಳಲು ಕಾರಣ. ಪರಾಶರರು ಆಚಾರವಿಲ್ಲದವನು ಧರ್ಮಪರಾಙ್ಮುಖನಾಗುತ್ತಾನೆ ಎನ್ನುವರು. ಮನ್ವಾದಿಗಳೂ ಕೂಡ ಆಚಾರವೇ ಮುಖ್ಯ ಧರ್ಮವೆಂದೂ ಆಚಾರ ಹೀನನಿಗೆ ವೇದಗಳು ಏನೂ ಮಾಡಲಾರವೆಂದೂ ಆಚಾರದಿಂದಲೇ ಋಷಿಗಳು ಧರ್ಮವನ್ನು ಅರಿತರೆಂದೂ ಆಚಾರದ ಪ್ರಾಶಸ್ತ್ಯವನ್ನು ಸಾರಿದ್ದಾರೆ. ಇಂತಹ ಧರ್ಮಕ್ಕೆ ಮೂಲ 'ವೇದ'—ಈ ವೇದಗಳನ್ನು ಋಷಿಗಳು ಪ್ರತ್ಯಕ್ಷವಾಗಿ ನೋಡುವ ಕಾಲದಲ್ಲಿ ಬೇರೆ ಗ್ರಂಥಗಳ ಆವಶ್ಯಕತೆ ಇರಲಿಲ್ಲ. ಆದರೆ ಈ ಶಕ್ತಿಯು ಕಾಲಕ್ರಮದಲ್ಲಿ ಕಡಿಮೆಯಾಗ ತೊಡಗಿತು. ಆಗ ಪುರಾಣ, ನ್ಯಾಯ. ಮೀಮಾಂಸಾ, ಧರ್ಮಶಾಸ್ತ್ರಗಳ ಹಾಗೂ ಶಿಕ್ಷಾ ಮೊದಲಾದ ವೇದಾಂಗಗಳ ಆವಶ್ಯಕತೆಯುಂಟಾಯಿತು. ಆದರೆ ಇವುಗಳೆಲ್ಲವೂ ಸಮಾನ

ಬಲವುಳ್ಳವುಗಳಲ್ಲ. ಶ್ರುತಿಗಳು ಇತರ ಪ್ರಮಾಣಗಳ ಅಪೇಕ್ಷೆಯಿಲ್ಲದೆ ಸ್ವತಃ ಪ್ರಮಾಣವಾದವು. ಆದರೆ ಸ್ಮೃತಿಗಳಿಗೆ ಸ್ವತಃ ಪ್ರಾಮಾಣ್ಯವಿಲ್ಲ. ಇವುಗಳು ವೇದ ಮೂಲವಾದರೆ ಮಾತ್ರ ಪ್ರಮಾಣವಾಗುತ್ತವೆ. ಋಷಿಗಳು ವೇದಗಳನ್ನು ನೆನೆಸಿಕೊಂಡು ಅವುಗಳ ಸಾರವನ್ನು ಗ್ರಂಥರೂಪವಾಗಿ ರಚಿಸಿರುವುದೇ ಇದಕ್ಕೆ ಕಾರಣ. ಆದ್ದರಿಂದ ಪ್ರತ್ಯಕ್ಷ ಶ್ರುತಿಗೆ ವಿರೋಧ ಬಂದರೆ ಶ್ರುತಿಗಳು ಅಪ್ರಮಾಣವಾಗುತ್ತವೆಂದು ಶಬರ ಮೊದಲಾದವರ ಅಭಿಪ್ರಾಯ. ಈ ಮಟ್ಟಿಗೆ ಋಷಿಗೆ ಭ್ರಮೆ ಮೊದಲಾದ ದೋಷಗಳು ಒದಗಿರಬಹುದೆಂದು ಊಹಿಸುತ್ತಾರೆ. ಆದರೆ ಕುಮಾರಿ ಮುಂತಾದವರು ಶೃತಿಗೆ ವಿರುದ್ಧವಾದ ಸ್ಮೃತಿಗಳ ಕರ್ತೃಗಳಿಗೆ ಭ್ರಮಾದಿಕಾರಣವನ್ನು ಹೇಳಿದರೆ ವಿರುದ್ಧವಲ್ಲದ ಸ್ಮೃತಿಗಳು ವಿಚಾರದಲ್ಲೂ ಈ ಸಂಶಯಕ್ಕೆ ಅವಕಾಶವಿರುವುದರಿಂದ ಅಪ್ರಾಮಾಣ್ಯ ಹೇಳಬೇಕಾದೀತು. ಆದ್ದರಿಂದ ಶ್ರುತಿ ವಿರುದ್ಧವಾದ ಸ್ಮೃತಿಗಳಿಗೆ ಮೂಲಭೂತವಾದ ಶ್ರುತಿ ದೊರೆಯುವವರೆಗೂ ಸ್ಮೃತ್ಯರ್ಥವನ್ನು ಅನುಷ್ಠಾನ ಮಾಡಬಾರದೆಂದು ಅಭಿಪ್ರಾಯಪಡುತ್ತಾರೆ. ಇಲ್ಲಿ ಶೃತ್ಯರ್ಥ ಅನುಷ್ಠಾನ ಮಾಡಲು ಅವಕಾಶವಿರುವಾಗ ಜಘನ್ಯವಾದ ಸ್ಮೃತ್ಯರ್ಥವನ್ನು ಅನುಷ್ಠಾನ ಮಾಡಿದರೆ ಫಲ ದೊರೆಯದು ಎನ್ನುವುದೇ ಈ ಅಭಿಪ್ರಾಯಕ್ಕೆ ಕಾರಣವೆಂದು ಧರ್ಮ ಶಾಸ್ತ್ರಜ್ಞರ ಅಭಿಮತ. ಮೂರನೆಯ ಪ್ರಮಾಣ ಶಿಷ್ಟಾಚಾರ. ಸ್ಮೃತಿಕಾರರಿಗೆ ಎಲ್ಲಾ ಧರ್ಮವನ್ನೂ ತಿಳಿಸಲು ಅಸಾಧ್ಯವಾದ್ದರಿಂದ ಆಚಾರಕ್ಕೆ ಪ್ರಾಮಾಣ್ಯವನ್ನು ಹೇಳಬೇಕಾಯಿತು. ಆದರೆ ಈ ಆಚಾರವು ಶ್ರುತಿ, ಶ್ರುತಿಗಳಿಗೆ ವಿರೋಧವಾದರೆ ಪ್ರಮಾಣವಾಗಲಾರದು. ನಾಲ್ಕನೆಯ ಪ್ರಮಾಣ ಆತ್ಮತುಷ್ಟಿ. ಆದರೆ ಇದು ತನಗೆ ಮಾತ್ರ ಪ್ರಮಾಣ. ಶ್ರುತ್ಯಾದಿಗಳು ಭಿನ್ನ ಭಿನ್ನ ರೀತಿಯಲ್ಲಿ ಹೇಳಿದಾಗ ವಿರುದ್ಧವಾದ ಎರಡನ್ನು ಏಕಕಾಲದಲ್ಲಿ ಅನುಷ್ಠಾನ ಮಾಡಲು ಅಶಕ್ಯವಾದಾಗ ಯಾವುದಾದರೊಂದನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಆತ್ಮತುಷ್ಟಿಯು ಪ್ರಮಾಣವಾಗುತ್ತದೆ.

## ಧರ್ಮ ಪುರಾಣಗಳು

**ಪುರಾಣ ನ್ಯಾಯ ಮೀಮಾಂಸಾ ಧರ್ಮಶಾಸ್ತ್ರಾಂಗ ಮಿಶ್ರಿತಾಃ ।**
**ವೇದಾಃ ಸ್ಥಾನಾನಿ ವಿದ್ಯಾನಾಂ ಧರ್ಮಸ್ಯ ಚ ಚತುರ್ದಶ ॥**

ಹದಿನೆಂಟು ಪುರಾಣಗಳು, ನ್ಯಾಯ, ಮೀಮಾಂಸ, ಧರ್ಮಶಾಸ್ತ್ರಗಳೂ ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತೀಷ, ಕಲ್ಪವೆಂಬ ಆರು ಅಂಗಗಳಿಂದ ಕೂಡಿದ ಋಕ್, ಯಜುಸ್ಸು, ಸಾಮ (ಅಥರ್ವ) ವೆಂಬ ವೇದಗಳು–ಒಟ್ಟು ಹದಿನಾಲ್ಕು ಪ್ರಮಾಣ ಗ್ರಂಥಗಳೆಂದು ಮನು ಯಾಜ್ಞವಲ್ಕ್ಯ ಮೊದಲಾದವರ ಅಭಿಪ್ರಾಯ. ಧರ್ಮದಲ್ಲಿ ಶ್ರದ್ಧೆಯುಳ್ಳವರು ಧರ್ಮಾಚರಣೆ ಮಾಡುವಾಗ ಶಾಸ್ತ್ರದಂತೆ ಆಚರಿಸಬೇಕು. ಇದಕ್ಕೆ ವಿರುದ್ಧವಾದರೆ ಮಕ್ಕಳಾಟದಂತೆ ವ್ಯರ್ಥವಾಗುತ್ತದೆ ಎನ್ನುವುದು ಸ್ಮೃತಿಕಾರರ ಅಭಿಪ್ರಾಯ.

**ಸ್ವಾಭಿಪ್ರಾಯಕೃತಂ ಕರ್ಮ ಯತ್ ಕಿಂಚಿತ್ ಜ್ಞಾನವರ್ಜಿತಂ**
**ಕ್ರೀಡಾಕರ್ಮೇವ ಬಾಲಾನಾಂ ತತ್ ಸರ್ವಂ ನಿಷ್ಪ್ರಯೋಜನಮ್**

ಈ ಹದಿನಾಲ್ಕರ ಜೊತೆಗೆ ಆಯುರ್ವೇದ, ಧನುರ್ವೇದ, ಗಾಂಧರ್ವ ವೇದ, ಅರ್ಥಶಾಸ್ತ್ರ ಸೇರಿದರೆ ಹದಿನೆಂಟು ಪ್ರಮಾಣಗಳಾಗುತ್ತವೆ ಎಂದು ವಿಷ್ಣು ಪುರಾಣದಲ್ಲಿ ಹೇಳಿದೆ. ಇವುಗಳಲ್ಲಿ ಮೊದಲಿನ ಹದಿನಾಲ್ಕು ಧರ್ಮ ಪ್ರಧಾನವಾದವು. ಉಳಿದ ನಾಲ್ಕು ದೃಷ್ಟ ಪ್ರಯೋಜನ ಪ್ರಧಾನವಾದವು. ಆದರೂ ಆನುಷಂಗಿಕವಾಗಿ ಧರ್ಮವನ್ನು ಹೇಳುವುದರಿಂದ ಧರ್ಮಗ್ರಂಥಗಳ ಜೊತೆಗೆ ಸೇರಿಸಲಾಗಿದೆಯೆನ್ನುವುದು ನಿಬಂಧಕಾರರ ಅಭಿಮತ. ವೇದಾರ್ಥವನ್ನು ನಿರ್ಣಯಿಸಲು ನ್ಯಾಯಗಳನ್ನು ಸಿದ್ಧಗೊಳಿಸುವ ಮೀಮಾಂಸ ಮತ್ತು ನ್ಯಾಯ ಶಾಸ್ತ್ರವನ್ನು ವಿವೇಕಿಸುವ ಸ್ವತಂತ್ರ ಗ್ರಂಥಗಳಿರುವುದರಿಂದ ಅವುಗಳನ್ನು ವಿಚಾರ ಮಾಡದೆ ಪುರಾಣದ ಕಡೆಗೆ ಸ್ವಲ್ಪ ದೃಷ್ಟಿ ಹರಿಸಿ ಅನಂತರ ಧರ್ಮಶಾಸ್ತ್ರವನ್ನು ವಿಮರ್ಶಿಸೋಣ.

## ಪುರಾಣಗಳು

ಬ್ರಾಹ್ಮ, ಪಾದ್ಮ, ಶೈವ, ಭಾಗವತ, ನಾರದ, ಮಾರ್ಕಂಡೇಯ, ಆಗ್ನೇಯ, ಭವಿಷ್ಯ ಬ್ರಹ್ಮವೈವರ್ತ್ಯ, ಲೈಂಗ, ವಾರಾಹ, ಸ್ಕಾಂದ, ವಾಮನ, ಕೌರ್ಮ, ಮಾತ್ಸ್ಯ, ಗಾರುಡ, ಬ್ರಹ್ಮಾಂಡವೆಂದು ಪುರಾಣಗಳು ಹದಿನೆಂಟು. ಇವು ಧರ್ಮವನ್ನು ತಿಳಿಸಲು ಹೊರಟಿವೆ. ತೋರಿಕೆಗೆ ಮಾತ್ರ ಕಥೆಗಳನ್ನು ಹೇಳ ಹೊರಟಂತೆ ಕಂಡುಬಂದರೂ ಸಾಮಾನ್ಯ ಜನರನ್ನು ಕಥೆಯ ಮೂಲಕ

ಆಕರ್ಷಿಸಿ ಧರ್ಮೋಪದೇಶವನ್ನು ಮಾಡುತ್ತವೆ, ಕಹಿ ಔಷಧವನ್ನು ಬಯಸದ ಮಕ್ಕಳಿಗೆ ಸಿಹಿ ಲೇಪಿಸಿ ಔಷಧ ಕೊಡುವಂತೆ. ಈ ಪುರಾಣಗ್ರಂಥಗಳ ಒಟ್ಟು ಶ್ಲೋಕ ಸಂಖ್ಯೆ ನಾಲ್ಕುಲಕ್ಷ. ಈ ಹದಿನೆಂಟು ಪುರಾಣಗಳ ಜೊತೆಗೆ ಹದಿನೆಂಟು ಉಪಪುರಾಣಗಳೂ ಇವೆ. ಈ ಉಪಪುರಾಣಗಳು ಮಹಾಪುರಾಣದಿಂದಲೇ ಬಂದವು.

## ಧರ್ಮಶಾಸ್ತ್ರ

ಧರ್ಮಶಾಸ್ತ್ರಗಳನ್ನು ರಚಿಸಿದವರು ಮೂವತ್ತಾರು ಜನ. ಅವರಲ್ಲಿ ಮನು, ವ್ಯಾಸ, ಗೌತಮ, ಯಮ, ವಸಿಷ್ಠ, ದಕ್ಷ, ಶಾತಾತಪ, ಪಾರಶರ, ಆಪಸ್ತಂಬ, ಶಂಖ, ಬೋಧಾಯನ ಮೊದಲಾದವರು ಪ್ರಮುಖರು. ಇದಲ್ಲದೆ ಇನ್ನೂ ಬೇರೆ ಸ್ಮೃತಿಕಾರರು ಇದ್ದ ತೆ ಪ್ರಯೋಗಪಾರಿಜಾತ ಮೊದಲಾದ ಗ್ರಂಥಗಳಲ್ಲಿ ಕಂಡುಬರುತ್ತವೆ. ಇದರ ಜೊತೆಗೆ ಗೌತಮ ಆಪಸ್ತಂಬ ಮೊದಲಾದ ಅನೇಕ ಧರ್ಮ ಸೂತ್ರಗಳೂ ಸ್ಮೃತಿಗಳ ಗುಂಪಿಗೆ ಸೇರುತ್ತವೆ. ಇವರನ್ನೆಲ್ಲ ಶ್ರುತಿಗಳನ್ನು ಸಾಕ್ಷಾತ್ಕರಿಸುವ ಶಕ್ತಿಉಳ್ಳವರಾಗಿದ್ದರಿಂದ ಋಷಿಗಳೆಂದು ಕರೆದರು. ಇವರೆಲ್ಲ ಕಲಿಯುಗಕ್ಕಿಂತ ಹಿಂದಿನವರು. ಮುಂದಿನವರು ಇಂದ್ರಿಯ ದೌರ್ಬಲ್ಯಕ್ಕೆ ಒಳಗಾದ್ದರಿಂದ ಋಷಿತನವನ್ನು ಕಳೆದುಕೊಂಡರು ಎನ್ನುತ್ತಾರೆ ಆಪಸ್ತಂಬರು. ಆಗ ಹೊಸಮಾರ್ಗದ ಅವಶ್ಯಕತೆಯುಂಟಾಯಿತು. ಶ್ರುತಿಗಳನ್ನು ಸಾಕ್ಷಾತ್ಕರಿಸುವ ಶಕ್ತಿಇರುವವರೆಗೆ ಸ್ಮೃತಿಗಳ ಅವಶ್ಯಕತೆಯೇ ಉಂಟಾಗಲಿಲ್ಲ. ಅನಂತರ ಶ್ರುತಿಗಳ ಧಾರಣಾ ಶಕ್ತಿಯ ಕೊರತೆಯಿಂದ ಜನರಿಗೆ ಅನುಷ್ಠಾನ ಮಾಡಲು ಅನುಕೂಲ ದೃಷ್ಟಿಯಿಂದ ಸ್ಮೃತಿಗಳ ಉಗಮವಾಯಿತು. ಋಷಿಗಳು ವೇದಗಳನ್ನು ಪ್ರತ್ಯಕ್ಷೀಕರಿಸಿ ಸ್ಮರಿಸಿಕೊಂಡು ಬರೆದುದರಿಂದ ಇವುಗಳಿಗೆ ಸ್ಮೃತಿಯೆಂಬ ಹೆಸರು ಬಂದಿತು. ಆದರೆ ಈ ಸ್ಮೃತಿಗಳಲ್ಲೂ ಕೂಡ ವಿಭಿನ್ನವಾದ ಶ್ರುತಿಗಳಿಗೆ ಅನುಸರಿಸಿ ವಿರೋಧಗಳು ಕಂಡಾಗ ಇನ್ನೊಂದು ಮಾರ್ಗದ ಉಗಮವು ಅವಶ್ಯಕವೆನ್ನಿಸಿತು. ಈ ವಿರೋಧವನ್ನು ಪರಿಹರಿಸುವ ಮೂಲಕ ವ್ಯವಸ್ಥೆಗೊಳಿಸಿ ಅನುಷ್ಠಾನ ಮಾಡುವ ಶಕ್ತಿಯು ಕಡಿಮೆಯಾದ ಕಾರಣ ಕಮಲಾಕರ, ವೈದ್ಯನಾಥ ಮುಂತಾದವರು ಎಲ್ಲಾ ಸ್ಮೃತಿಗಳನ್ನು ಶಿಷ್ಟಾಚಾರಗಳನ್ನೂ ಕ್ರೋಢೀಕರಿಸಿ ಗ್ರಂಥ ರಚನೆ ಮಾಡಿದರು. ಈ ಗ್ರಂಥ

ಗಳನ್ನು ನಿಬಂಧಗಳೆಂದು ಕರೆಯುತ್ತಾರೆ. ನಿಬಂಧಗಳಿಗೆ ಸ್ಮೃತಿಯಂತೆ ಪ್ರಾಮಾಣ್ಯವಿಲ್ಲದಿದ್ದರೂ ಶಿಷ್ಟಾಚಾರದಂತೆ ಪ್ರಾಮಾಣ್ಯವಿದ್ದೇ ಇದೆ. ಆದ್ದರಿಂದಲೇ ತಮ್ಮ ತಮ್ಮ ಶಿಷ್ಟಾಚಾರಕ್ಕನುಗುಣವಾದ ನಿಬಂಧಗಳನ್ನು ಮಾತ್ರ ಆಯಾಯ ಪ್ರದೇಶದವರು ಪ್ರಮಾಣವೆಂದು ಸ್ವೀಕರಿಸಿದ್ದಾರೆ. ಉದಾ–ದಾಕ್ಷಿಣಾತ್ಯರು ವೈದ್ಯನಾಥೀಯವನ್ನು ಪ್ರಮಾಣವೆಂದು ಸ್ವೀಕರಿಸಿದಂತೆ ನಿರ್ಣಯಸಿಂಧುವನ್ನು ಅಷ್ಟು ಪ್ರಮಾಣವೆಂದು ಸ್ವೀಕರಿಸುವುದಿಲ್ಲ. ಹಾಗೆಯೇ ಕರ್ನಾಟಕ. ಆಂಧ್ರ, ಮಹಾರಾಷ್ಟ್ರ ಮೊದಲಾದ ದೇಶದವರು ವೈದ್ಯನಾಥೀಯಕ್ಕಿಂತ ನಿರ್ಣಯಸಿಂಧುವನ್ನೇ ಪ್ರಮಾಣವೆಂದು ಸ್ವೀಕರಿಸುತ್ತಾರೆ. ಹೀಗೆ ವೇದಕಾಲದಿಂದ ನಿಬಂಧಕಾರರವರೆಗಿನ ಬೆಳವಣಿಗೆಯನ್ನು ಗಮನಿಸಿದಂತಾಯ್ತು.

## ಧರ್ಮ ವಿಭಾಗ

ಧರ್ಮಶಾಸ್ತ್ರವನ್ನು ಆಚಾರ, ವ್ಯವಹಾರ ಮತ್ತು ಪ್ರಾಯಶ್ಚಿತ್ತ ಕಾಂಡಗಳೆಂದು ಮೂರು ರೀತಿಯಲ್ಲಿ ವಿಂಗಡಿಸಿದ್ದಾರೆ. ಆಚಾರಕಾಂಡದಲ್ಲಿ ವರ್ಣ ಮತ್ತು ಆಶ್ರಮಗಳ ಧರ್ಮಗಳನ್ನು ನಿರೂಪಿಸಲಾಗಿದೆ. ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಮತ್ತು ಶೂದ್ರರೆಂದು ವರ್ಣಗಳು ನಾಲ್ಕು. ಈ ವರ್ಣಗಳು ಜಾತಿಯಂತೆ ಹುಟ್ಟಿನಿಂದಲೇ ಬರತಕ್ಕದಾಗಿದೆ ಈ ವಿಚಾರದಲ್ಲಿ ವರ್ಣಗಳು ಕರ್ಮದಿಂದ ಸಿದ್ಧಿಸುವುದೆಂದು ಕೆಲವರ ವಾದ. ಇದಕ್ಕೆ ಪುಷ್ಟೀಕರಣಕ್ಕಾಗಿ, "ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ" ಎನ್ನುವ ಗೀತಾವಚನವನ್ನು ಆಧಾರವಾಗಿ ಉದಾಹರಿಸುತ್ತಾರೆ. ಅಂದರೆ ಅವರವರ ಗುಣ, ಕರ್ಮಗಳನ್ನನುಸರಿಸಿ ಜಾತಿ ವ್ಯವಸ್ಥೆಯಾಗಿದೆ. ಶಮ ದಮ ಮೊದಲಾದ ಗುಣಗಳು ಯಾರಲ್ಲಿವೆಯೋ ಅವರು ಬ್ರಾಹ್ಮಣರೆಂದೂ, ಯಾರಲ್ಲಿ ಶೌರ್ಯ ಮೊದಲಾದ ಗುಣಗಳಿವೆಯೋ ಅವರನ್ನು ಕ್ಷತ್ರಿಯರೆಂದೂ ಕರೆಯಬಹುದು. ಆದ್ದರಿಂದಲೇ ವಿಶ್ವಾಮಿತ್ರನು ಜಾತಿಯಿಂದ ಕ್ಷತ್ರಿಯನಾದರೂ ಗುಣದಿಂದ ಬ್ರಾಹ್ಮಣ್ಯವನ್ನು ಪಡೆದ ಎಂದೂ ವಾದಿಸುತ್ತಾರೆ. ಆದರೆ ಪ್ರಾಚೀನ ಧರ್ಮಶಾಸ್ತ್ರಗಳನ್ನು ಅವಲೋಕಿಸುವಾಗ ಈ ವಾದವು ಭಾರತೀಯರಿಗೆ ಸಮ್ಮತವಿರುವಂತೆ ಕಂಡುಬರುವುದಿಲ್ಲ. ಜಾತಿ ಹೇಗೆ ಬದಲಾಗಲಾರದೊ ಹಾಗೆಯೇ ವರ್ಣವೂ ಬದಲಾಗಲಾರದು. ಆದ್ದರಿಂದ ಗೀತೆಯಲ್ಲಿಯೇ,

**ಬ್ರಾಹ್ಮಣ ಕ್ಷತ್ರಿಯ ವಿಶಾಂ ಶೂದ್ರಾಣಾಂ ಚ ಪರಂತಪ
ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವ ಪ್ರಭವೈಃ ಗುಣೈಃ**

ಎಂದು ಬ್ರಾಹ್ಮಣ ಕ್ಷತ್ರಿಯ ಮೊದಲಾದವರಿಗೆ ಅವರವರ ಸ್ವಭಾವಕ್ಕನುಸರಿಸಿ ಮಾಡಬೇಕಾದ, ಪಾಲಿಸಬೇಕಾದ ಗುಣ, ಕರ್ಮಗಳನ್ನು ವಿಭಾಗಿಸಲಾಗಿದೆ ಎಂದಿದೆ. ಅಂದರೆ ಬ್ರಾಹ್ಮಣರಿಗೆ ಶಮ ದಮಾದಿ ಗುಣಗಳು ಯೋಗ್ಯವೆಂದೂ, ಕ್ಷತ್ರಿಯರಿಗೆ ಶೌರ್ಯ ಮೊದಲಾದ ಗುಣಗಳು ಯೋಗ್ಯವೆಂದೂ ಇದರ ತಾತ್ಪರ್ಯ. ಮತ್ತು ಸ್ಮೃತಿಯಲ್ಲಿ "ಜನ್ಮನಾ ಬ್ರಾಹ್ಮಣೋ ಜ್ಞೇಯಃ ಕರ್ಮಣಾ ದ್ವಿಜ ಉಚ್ಯತೇ" ಎಂದಿರುವುದು ಸಂಸ್ಕಾರದಿಂದ ಜಾತಿ ಎನ್ನುವುದಕ್ಕೆ ಸಾಧಕವಾಗಲಾರದೆಂದು ತಿಳಿದು, "ಜನ್ಮನಾ ಜಾಯತೇ ಶೂದ್ರಃ" ಎನ್ನುವ ಪಾಠವನ್ನು ಕಲ್ಪಿಸಿ ತಮ್ಮ ವಾದವನ್ನು ಸಮರ್ಥಿಸುವವರ ಪಾಂಡಿತ್ಯಕ್ಕೆ ಏನೆನ್ನಬೇಕೋ ತಿಳಿಯದು. ಆದ್ದರಿಂದ ಅವರವರಿಗೆ ಸಾಧ್ಯವಾದ ಕರ್ಮಗಳನ್ನು ಅವರವರೇ ಮಾಡುವುದರಿಂದ ಮಾತ್ರ ದೇಶ ಅಭಿವೃದ್ಧಿ ಹೊಂದೀತೆ ಹೊರತು ಕರ್ಮದ ಪರಿಚಯವೇ ಇಲ್ಲದೆ ಎಲ್ಲರೂ ಎಲ್ಲ ಕರ್ಮವನ್ನೂ ಮಾಡಿದರೆ ಕರ್ಮ ಹಾಳಾಗುವುದಲ್ಲದೆ ಯಾರಿಗೂ ಯಾವ ಪ್ರಯೋಜನವೂ ಆಗದೆನ್ನುವುದು ಋಷಿಗಳ ಸಮ್ಮತ. ಆದರೆ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಮಾತ್ರಕ್ಕೆ ಬ್ರಾಹ್ಮಣನಾದಾನೇ ಹೊರತು ದ್ವಿಜನಾಗಲಾರ. ಶಾಸ್ತ್ರೀಯವಾದ ಉಪನಯನಾದಿ ಸಂಸ್ಕಾರಗಳಿಂದ ಸಂಸ್ಕೃತನಾಗಿ ಗುರುಕುಲದಲ್ಲಿ ಸಂಪೂರ್ಣ ವೇದ ಶಾಸ್ತ್ರಾಧ್ಯಯನ ಮುಗಿಸಿ ಅಂತೆಯೇ ತನ್ನ ಆಚರಣೆಯಲ್ಲಿ ಧರ್ಮವನು ಅಳವಡಿಸಿಕೊಳ್ಳುವವನೇ ದ್ವಿಜನು. ಮತ್ತು 'ಗುಣ ಕರ್ಮ ವಿಭಾಗಶಃ' ಎನ್ನುವುದಕ್ಕೆ ಆಧುನಿಕ ಅರ್ಥವೇ ಸರಿಯಾಗಿದ್ದರೆ ಮಹಾಭಾರತದಲ್ಲಿಯೇ ಇದಕ್ಕೆ ಸಾಕಷ್ಟು ಉದಾಹರಣೆ ಸಿಗಬೇಕಿತ್ತು. ವಿಶ್ವಾಮಿತ್ರನಿಗೆ ಬ್ರಾಹ್ಮಣ್ಯ ಬಂದುದು ಅವನ ತಪಸ್ಸಿನ ಪರಿಶ್ರಮದಿಂದ. ತಪಸ್ಸಿನ ಜ್ವಾಲೆಗೆ ಹೆದರಿದ ಬ್ರಹ್ಮಾದಿಗಳು 'ನೀನು ಬ್ರಾಹ್ಮಣನಾದೆ' ಎಂದರೂ ವಿಶ್ವಾಮಿತ್ರನು ನಂಬಲಿಲ್ಲ. ಕಾರಣ ಜಾತಿ ಬದಲಾಗದು ಮತ್ತು ಅದನ್ನು ಯಾರೂ ಒಪ್ಪಲಾರರು ಎನ್ನುವುದೇ ಆಗಿದೆ. ಅದಕ್ಕಾಗಿಯೇ ಬ್ರಹ್ಮರ್ಷಿಯಾದ ವಸಿಷ್ಠರು ಒಪ್ಪಿದರೆ ಮಾತ್ರ ಇದನ್ನು ಎಲ್ಲರೂ ಮಾನ್ಯ ಮಾಡಿಯಾರು ಎನ್ನುವ ದೃಷ್ಟಿಯಿಂದ ವಸಿಷ್ಠರ ಮುಖದಿಂದಲೇ ಹೇಳಿಸುವ ಉದ್ದೇಶವಾಗಿತ್ತು. ಇದನ್ನು ಬಿಟ್ಟರೆ

ಇತರ ಕಡೆಗಳಲ್ಲಿ ಜಾತಿಯಿಂದಲೇ ಬ್ರಾಹ್ಮಣ್ಯ—ಎನ್ನುವುದಕ್ಕೆ ಸಾಕಷ್ಟು ಪುರಾವೆಗಳು ಸಿಗುತ್ತವೆ. ಸಾಕ್ಷಾತ್ ಧರ್ಮನ ಅವತಾರವಾದರೂ ಶಮ ದಮಾದಿ ಗುಣಗಳಿದ್ದರೂ ಧರ್ಮರಾಜ, ಭೀಷ್ಮ, ವಿದುರ ಇತರ ಮೊದಲಾದ ವರನ್ನು ತಪ್ಪಿಯೂ ಎಲ್ಲಿಯೂ ಬ್ರಾಹ್ಮಣರೆಂದು ಕರೆದಿಲ್ಲ. ಜಾತಿಯಿಂದ ಬ್ರಾಹ್ಮಣರಾದ ದ್ರೋಣ, ಕೃಪ, ಅಶ್ವತ್ಥಾಮ ಮೊದಲಾದವರು ಶೌರ್ಯಾದಿ ಕ್ಷತ್ರಿಯ ಗುಣವನ್ನು ಪಡೆದು ಕ್ಷಾತ್ರವೃತ್ತಿಯನ್ನೇ ಕೈಗೊಂಡಿದ್ದರೂ ಒಮ್ಮೆಯೂ ಅವರನ್ನು ಕ್ಷತ್ರಿಯರೆಂದು ಕರೆಯಲಿಲ್ಲ. ಅಷ್ಟೇಕೆ ಘೋರ ಹತ್ಯಾದೋಷಕ್ಕೆ ಒಳಗಾದ ಅಶ್ವತ್ಥಾಮನನ್ನು ಬ್ರಾಹ್ಮಣನೆಂದೇ ತಿಳಿದು ಕೊಲ್ಲದೇ ಬಿಟ್ಟುಬಿಟ್ಟ ಉದಾಹರಣೆ ಸೌಪ್ತಿಕ ಪರ್ವದಲ್ಲಿ ಕಂಡುಬರುತ್ತದೆ. "ಜಿತ್ವಾ ಮುಕ್ತೋ ದ್ರೋಣಪುತ್ರಃ ಬ್ರಾಹ್ಮಣ್ಯಾತ್ ಗೌರವೇಣ ಚ" ಎನ್ನುವ ಮಹಾಭಾರತದ ವಚನವನ್ನು ಗಮನಿಸಬೇಕು. ಧೃತರಾಷ್ಟ್ರನು ಯುದ್ಧದ ಚಿಂತನೆಯಲ್ಲಿ ಜ್ಞಾನೋಪದೇಶವನ್ನು ಪಡೆಯಬೇಕೆಂದು ಜ್ಞಾನಿಯಾದ ವಿದುರ ನನ್ನೇ ಕೇಳಿದರೂ ತಾನು ಜಾತಿಯಿಂದ ಬ್ರಾಹ್ಮಣನಲ್ಲದಿದ್ದ ಕಾರಣ ಬ್ರಾಹ್ಮಣ ರಾದ ಸನತ್ಕುಮಾರರನ್ನು ಕರೆಸಿ ಅವರಿಂದ ಉಪದೇಶ ಕೊಡಿಸಿರುವುದಕ್ಕಿಂತ ಹೆಚ್ಚಿನ ಉದಾಹರಣೆ ಇನ್ನೇನು ಬೇಕು. ಆದ್ದರಿಂದ ಶಮ ದಮಾದಿ ಗುಣಗಳು ಬ್ರಾಹ್ಮಣನಿಗೆ ಸ್ವಾಭಾವಿಕವಾದುದು ಎನ್ನುವುದನ್ನು "ಸ್ವಭಾವಜಂ" ಎನ್ನುವ ಪದದಿಂದ ತಿಳಿಸಿದ್ದಾರೆ. ಹೀಗಿರುವಾಗ ಶಮ ದಮಾದಿ ಗುಣಗಳಿರುವಾಗ ಬ್ರಾಹ್ಮಣನೆಂದೂ, ಅದೇ ವ್ಯಕ್ತಿಯಲ್ಲಿ ಶೌರ್ಯಾದಿ ಗುಣವಿರುವಾಗ ಕ್ಷತ್ರಿಯ ನೆಂದೂ ಕರೆದರೆ ನಿರ್ಣಯವಾದರೂ ಹೇಗಾಗಬೇಕು. ಇದು ಕಾರ್ಯ ಸಾಧ್ಯವೂ ಅಲ್ಲ, ವಿವೇಕಿಗಳು ಒಪ್ಪುವ ಮಾತಂತೂ ಅಲ್ಲ. ಆದ್ದರಿಂದಲೇ ಅರ್ಜುನನು ಬ್ರಾಹ್ಮಣ ಧರ್ಮವನ್ನು ಪಡೆದು ಕ್ಷಾತ್ರವೃತ್ತಿಯನ್ನು ತ್ಯಜಿಸಲು ಬಯಸಿದಾಗ ಶ್ರೀಕೃಷ್ಣನು "ಕ್ಲೈಬ್ಯಂ ಮಾಸ್ಮ ಗಮಃ ಪಾರ್ಥ" "ಧರ್ಮ್ಯಂ ಸಂಗ್ರಾಮಂ ನ ಕರಿಷ್ಯಸಿ ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಮವಾಪ್ಸ್ಯಸಿ" "ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್" "ಶ್ರೇಯಾನ್ ಸ್ವಧರ್ಮೋ ವಿಗುಣಃ" "ಸ್ವಧರ್ಮೇ ನಿಧನಂ ಶ್ರೇಯಃ" ಎನ್ನುವ ಹಲವಾರು ಗೀತಾವಚನಗಳು ಜಾತಿಯಿಂದಲೇ ವರ್ಣ ವ್ಯವಸ್ಥೆ, ಗುಣದಿಂದಲ್ಲ ಎನ್ನುವು ದನ್ನು ಸಿದ್ಧಾಂತೀಕರಿಸುತ್ತವೆ. ಅದಕ್ಕಾಗಿಯೇ ಹಿರಿಯರು "ತಸ್ಮಾತ್ ಶಾಸ್ತ್ರಂ

ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ" ಎಂದು ಅಪ್ಪಣೆ ಕೊಡಿಸಿದ್ದಾರೆ. ಸಾಮಾನ್ಯವಾಗಿ ವರ್ಣಾಶ್ರಮ ಧರ್ಮಗಳ ಗುರಿ ಪರಲೋಕದ ಶ್ರೇಯಸ್ಸನ್ನುಂಟುಮಾಡುವುದೇ ಆಗಿದೆ. ಈ ಶ್ರೇಯಸ್ಸು ಅಂದರೆ ಪುಣ್ಯವು ಕಣ್ಣಿಗೆ ಕಾಣುವುದಿಲ್ಲ. ಈ ವಿಚಾರದಲ್ಲಿ ಶಾಸ್ತ್ರವೇ ಪ್ರಮಾಣ. ಆದ್ದರಿಂದ ಶಾಸ್ತ್ರಗಳನ್ನು ತಿಳಿದು ಅದರಲ್ಲಿ ಹೇಳಿದ ಧರ್ಮಗಳನ್ನು ಆಚರಿಸಿದರೆ ಮಾತ್ರ ಫಲ ದೊರೆತೀತು, ಇಲ್ಲವಾದರೆ ಮಕ್ಕಳಾಟದಂತೆ ನಿಷ್ಫಲ. ಹೀಗಿರುವಾಗ ಇನ್ನೊಬ್ಬರ ಧರ್ಮದ ಕಡೆಗೆ ನಾವೇಕೆ ದೃಷ್ಟಿ ಹರಿಸಬೇಕು. ಎರಡನೆಯದಾದ ವ್ಯವಹಾರ ಕಾಂಡದಲ್ಲಿ ವ್ಯವಹಾರ ಅಂದರೆ ರಾಜಧರ್ಮ ಮೊದಲಾದವುಗಳನ್ನು ತಿಳಿಸಿದ್ದಾರೆ. ಪ್ರಾಯಶ್ಚಿತ್ತ ಕಾಂಡದಲ್ಲಿ ಶಾಸ್ತ್ರವನ್ನು ಮೀರುವುದರಿಂದ ಉಂಟಾಗುವ ದೋಷ ಪರಿಹಾರಕ್ಕಾಗಿ ಅನೇಕ ಪ್ರಾಯಶ್ಚಿತ್ತ ಕರ್ಮಗಳು ಹೇಳಲ್ಪಟ್ಟಿವೆ. ಮತ್ತೆ ಕೆಲವರು ಧರ್ಮವನ್ನು ಸಾಧಾರಣ ಮತ್ತು ಅಸಾಧಾರಣವೆಂದು ವಿಭಾಗಿಸಿದ್ದಾರೆ.

## ಸಾಧಾರಣ ಧರ್ಮ

ಜಾತಿ ಬೇಧವಿಲ್ಲದೆ ಎಲ್ಲರೂ ಪಾಲಿಸಬೇಕಾದ ಧರ್ಮವೇ ಸಾಧಾರಣ ಧರ್ಮ. ಈ ಸಾಧಾರಣ ಧರ್ಮಗಳ ಬಲದಿಂದಲೇ ಭಾರತೀಯ ಸಂಸ್ಕೃತಿ ಬೇರೂರಿ ನೆಲೆನಿಂತಿದೆ.

**ದಯಾ ಕ್ಷಮಾನಸೂಯಾ ಚ ಶೌಚಾನಾಯಾಸ ಮಂಗಲಂ ।**
**ಅಕಾರ್ಪಣ್ಯಂ ಅಸ್ಪೃಹತ್ವಂ ಸರ್ವ ಸಾಧಾರಣಾನಿ ಚ ॥**

ಅಂದರೆ ದಯಾ, ಕ್ಷಮಾ, ಅನಸೂಯಾ, ಶೌಚ, ಅನಾಯಾಸ, ಮಂಗಲ, ಅಕಾರ್ಪಣ್ಯ, ಅಸ್ಪೃಹತ್ವ ಇವು ಸರ್ವಸಾಧಾರಣ ಧರ್ಮಗಳು. ಈಗ ಇವುಗಳ ಸ್ವರೂಪವನ್ನು ವಿವೇಚಿಸೋಣ–ಶತ್ರು, ಬಂಧು, ಪರಕೀಯನೆಂಬ ಭೇದ ಎಣಿಸದೆ ವಿಪತ್ತಿನಲ್ಲಿರುವವನನ್ನು ಕಾಪಾಡುವುದೇ **ದಯೆ**. ಹೊರಗಿನ ಮತ್ತು ಅಂತಃಕರಣದ ಯಾವ ದುಃಖವೇ ಬರಲಿ ಕೋಪಗೊಳ್ಳದೆ ಇನ್ನೊಬ್ಬರನ್ನು ಹಿಂಸಿಸದಿರುವುದೇ **ಕ್ಷಮೆ**, ಗುಣವಂತರ ಗುಣಗಳನ್ನು ತೆಗಳದೆ ಸ್ವಲ್ಪ ಗುಣವುಳ್ಳವರನ್ನು ಹೊಗಳುತ್ತಾ ಇತರರ ದೋಷವನ್ನು ಎತ್ತಿ ಆಡದಿರುವುದೇ

**ಅನಸೂಯೆ.** ಅಧರ್ಮವನ್ನು ತೊರೆದು ಅತಿನಿಂದಿತರ ಸಹವಾಸ ಮಾಡದೆ ತನ್ನ ಧರ್ಮದಲ್ಲಿರುವುದೇ **ಶೌಚ.** ಒಳ್ಳೆಯ ಕೆಲಸವಾದರೂ ಶರೀರಕ್ಕೆ ಅತಿ ಪೀಡೆಯನ್ನುಂಟುಮಾಡುವ ಕೆಲಸವನ್ನು ಮಾಡದಿರುವುದೇ **ಅನಾಯಾಸ.** ಕೆಟ್ಟ ಕೆಲಸಗಳನ್ನು ಬಿಟ್ಟು ಒಳ್ಳೆಯ ಕೆಲಸಗಳನ್ನು ಕೈಗೊಳ್ಳುವುದೇ **ಮಂಗಳ.** ಸ್ವಲ್ಪವೇ ಸಂಪತ್ತಿದ್ದರೂ ದೈನ್ಯವಿಲ್ಲದೆ ಸ್ವಲ್ಪವನ್ನೇ ದಾನ ಮಾಡುವುದು **ಅಕಾರ್ಪಣ್ಯ.** ಪರರ ಸಂಪತ್ತಿಗೆ ಅಸೂಯೆ ಪಡದೆ ದೊರೆತಷ್ಟಕ್ಕೆ ತೃಪ್ತಿ ಪಡುವುದೇ **ಅಸ್ಪೃಹಾ.** ಇವಲ್ಲದೆ ಮಹಾಭಾರತದಲ್ಲಿ, ಪ್ರಾಣಿಗಳಿಗೆ ಹಿತವನ್ನುಂಟು ಮಾಡುವುದು **ಸತ್ಯ.** ಮನಸ್ಸನ್ನು ನಿಗ್ರಹಿಸುವುದು **ದಮ.** ತನ್ನ ಧರ್ಮದಲ್ಲಿರುವುದು **ತಪಸ್ಸು.** ಸೌಕರ್ಯ ತ್ಯಾಗವೇ **ಶೌಚ.** ವಿಷಯ ಸುಖಗಳ ಪರಿತ್ಯಾಗವೇ **ಸಂತೋಷ.** ಅಕಾರ್ಯದ ತ್ಯಾಗವೇ **ನಾಚಿಕೆ ಪಡುವಿಕೆ.** ಜಗಳಕ್ಕೆ ಕಾರಣವಿದ್ದರೂ ಸಹನೆಯಿಂದಿರುವುದು **ಸಹನೆ.** ಮನಸ್ಸಿನ ಶಾಂತಿಯೇ **ಶಮ.** ಪ್ರಾಣಿಗಳ ಹಿತಚಿಂತನೆಯೇ **ದಯೆ.** ಮನಸ್ಸಿನಲ್ಲಿ ವಿಷಯಗಳನ್ನು ಚಿಂತಿಸದಿರುವುದೇ **ಧ್ಯಾನ.** ಎಂದು ಹೆಚ್ಚಿಗೆ ಹೇಳಿದೆ. ಹೀಗೆ ಸಾಧಾರಣ ಧರ್ಮಗಳನ್ನೂ ಅದರ ಸ್ವರೂಪವನ್ನೂ ಶಾಸ್ತ್ರಕಾರರು ವಿವರಿಸಿದ್ದಾರೆ. ಧರ್ಮದ ರಹಸ್ಯವನ್ನೇ ಹೇಳುತ್ತೇನೆಂದು ಹೊರಟ ದೇವಲ ತನಗೆ ಪ್ರತಿಕೂಲವಾದುದು ಪರರಿಗೂ ಪ್ರತಿಕೂಲವೆಂದು ಭಾವಿಸಿ ಇತರರಿಗೆ ತೊಂದರೆ ಮಾಡಬಾರದು ಎಂದು ಹೇಳಿದ್ದಾನೆ. ಈ ಸಾಧಾರಣ ಧರ್ಮವು ಪ್ರತಿಯೊಬ್ಬ ಮಾನವನಿಗೂ ಆವಶ್ಯಕವಾದುದು. ಇವುಗಳಲ್ಲಿ ಒಂದೊಂದೇ ಧರ್ಮವನ್ನು ಪಾಲಿಸುವವನೂ ಕೂಡ ತನ್ನ ಜೀವನವನ್ನು ಉತ್ತಮಪಡಿಸಿಕೊಳ್ಳಲು ಶಕ್ತನಾಗುತ್ತಾನೆ. ಮಾನವನು ಮನುಷ್ಯತ್ವವನ್ನು ತೊರೆದು ಪಶುತ್ವದ ಕಡೆಗೆ ಇಳಿಯುತ್ತಿರುವ ಇಂದಿನ ಕಾಲದಲ್ಲಿ ಈ ಗುಣಗಳ ಪರಿಚಯ ಮಾಡಿಸುವುದಾದರೆ ನಿಜವಾಗಿಯೂ ಮಾನವನು ಮಾನವತೆಯನ್ನು ಪಡೆದು, ಸಮಾಜಕ್ಕೆ ಹೊರೆಯಾಗದೆ, ಸಮಾಜದೊಡನೆ ತಾನೂ ಅಭಿವೃದ್ಧಿ ಹೊಂದಬಹುದು. ಈ ವಿಚಾರದಲ್ಲಿ ದಕ್ಷನು ಮುತ್ತಿನಂತಹ ಮಾತಾಡಿದ್ದಾನೆ. "ಧರ್ಮ ಸರ್ವಸ್ವವನ್ನು ಕೇಳಿರಿ, ಕೇಳಿ ನಿಶ್ಚಯಿಸಿಕೊಳ್ಳಿರಿ: ಏನೆಂದರೆ ತನಗೆ ಪ್ರತಿಕೂಲವಾದುದು ಬೇರೆಯವರಿಗೂ ಪ್ರತಿಕೂಲವೆಂದೆಣಿಸಿ ಇತರರಿಗೆ ಕೆಡಕನ್ನುಂಟು ಮಾಡಬೇಡಿ.

**ಶ್ರೂಯತಾಂ ಧರ್ಮ ಸರ್ವಸ್ವಂ ಶ್ರುತ್ವಾ ಚೈವಾವಧಾರ್ಯತಾಮ್**
**ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್ ॥**

# ಅಸಾಧಾರಣ ಧರ್ಮಗಳು

ಅಸಾಧಾರಣ ಧರ್ಮಗಳನ್ನು ಭವಿಷ್ಯ ಪುರಾಣದಲ್ಲಿ ಹೀಗೆ ವಿವರಿಸಿದೆ. ವರ್ಣ ಧರ್ಮ, ಆಶ್ರಮ ಧರ್ಮ, ವರ್ಣಾಶ್ರಮ ಧರ್ಮ, ಗುಣ ಧರ್ಮ ನಿಮಿತ್ತ ಧರ್ಮ ಎಂದು. ಇದರಲ್ಲಿ ಬ್ರಾಹ್ಮಣ, ಕ್ಷತ್ರಿಯ ಮೊದಲಾದ ವರ್ಣದವರನ್ನು ಕುರಿತುಹೇಳುವ ಧರ್ಮಗಳು ವರ್ಣ ಧರ್ಮ. ಈ ಗುಂಪಿನಲ್ಲಿ ಉಪನಯನಾದಿಗಳು ಸೇರುತ್ತವೆ. ಆಶ್ರಮ ಧರ್ಮವೆಂದರೆ ಬಹ್ಮಚರ್ಯಾದಿ ಆಶ್ರಮದಲ್ಲಿ ಮಾಡಬೇಕಾದ ಧರ್ಮಗಳು. ಭಾರತೀಯರು ಸಾಮಾನ್ಯವಾಗಿ ಎಲ್ಲವನ್ನೂ ನಾಲ್ಕು ರೀತಿಯಾಗಿ ವಿಂಗಡಿಸಿದ್ದು ಕಂಡುಬರುತ್ತದೆ. ಉದಾ : ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಎಂದು ನಾಲ್ಕು ವೇದಗಳು. ಪ್ರತಿ ವೇದದಲ್ಲಿಯೂ ಸಂಹಿತೆ, ಬ್ರಾಹ್ಮಣ, ಆರಣ್ಯಕ ಉಪನಿಷತ್ ಎಂಬ ನಾಲ್ಕು ವಿಭಾಗಗಳು. ಇವುಗಳಿಗೆ ಸಂಬಂಧಿಸಿದಂತೆ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸನ್ಯಾಸ ಎಂದು ನಾಲ್ಕು ಆಶ್ರಮಗಳು ಬ್ರಹ್ಮಚರ್ಯಾಶ್ರಮದಲ್ಲಿ ವೇದಾ(ಸಂಹಿತಾ)ಧ್ಯಯನವನ್ನು ಮಾಡಬೇಕು. ಗೃಹಸ್ಥಾಶ್ರಮದಲ್ಲಿ ಬ್ರಾಹ್ಮಣದಲ್ಲಿ ಹೇಳಿದ ಕರ್ಮಾನುಷ್ಠಾನ ಮಾಡಬೇಕು. ವಾನಪ್ರಸ್ಥಾಶ್ರಮದಲ್ಲಿ ಅರಣ್ಯದಲ್ಲಿದ್ದು ಆರಣ್ಯಕದಲ್ಲಿ ಹೇಳಿದಂತೆ ನಡೆಯಬೇಕು. ಸನ್ಯಾಸಾಶ್ರಮದಲ್ಲಿ ಉಪನಿಷತ್‌ನಲ್ಲಿ ತಿಳಿಸಿದ ಬ್ರಹ್ಮನ ಸಾಕ್ಷಾತ್ಕಾರದಿಂದ ಮುಕ್ತಿ ಪಡೆದು ಜನ್ಮಸಾಫಲ್ಯವನ್ನು ಹೊಂದಬೇಕು ಎಂಬುದೇ ಈ ಆಶ್ರಮಧರ್ಮಗಳ ರಹಸ್ಯ. ವರ್ಣ ಮತ್ತು ಆಶ್ರಮಗಳನ್ನಿಟ್ಟುಕೊಂಡು ಹೇಳಿದ ಧರ್ಮಗಳು ಗುಣಧರ್ಮ. ನಿಮಿತ್ತವನ್ನಿಟ್ಟುಕೊಂಡು ಹೇಳಿದ ಧರ್ಮ ನಿಮಿತ್ತ ಧರ್ಮ.

ಮಾನವನು ಜನ್ಮದ ಸಾಫಲ್ಯ ಪಡೆಯಲು ಸಾಧನವನ್ನು ಸಂಪಾದಿಸಿಕೊಳ್ಳಬೇಕು. ಯಾವ ಕಾರ್ಯವೇ ಆಗಲೀ ಕಾರಣವಿಲ್ಲದೇ ಸಿದ್ಧಿಸಲಾರದಷ್ಟೆ. ಆದ್ದರಿಂದ ಜನ್ಮ ಸಾಫಲ್ಯ ಸಾಧನಗಳಲ್ಲಿ ಶರೀರವೂ ಒಂದು. ಧರ್ಮ ಸಾಧನೆಗೆ ಮೊದಲ ಸೋಪಾನ. ಶರೀರ ಮತ್ತು ಆ ಶರೀರವನ್ನು ಆಶ್ರಯಿಸಿದ ಆತ್ಮನು ಶುದ್ಧವಾಗಿರದಿದ್ದರೆ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮಗಳಾ

ಗಲೀ, ಪರವು ಪುರುಷಾರ್ಥವಾದ ಮೋಕ್ಷವಾಗಲೀ ದೊರೆಯದು. ಆದ್ದರಿಂದ
ಇದರ ಶುದ್ಧಿಗಾಗಿ ಸಂಸ್ಕಾರಗಳು ಏರ್ಪಟ್ಟವು. ಸಂಸ್ಕಾರವೆಂದರೆ ವಿಹಿತ
ಕ್ರಿಯೆಯಿಂದ ಉಂಟಾಗುವ ಶರೀರ ಅಥವಾ ಆತ್ಮನಲ್ಲಿರುವ ಅತಿಶಯ ವಿಶೇಷ.
ಇವುಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು ಮೊದಲನೆಯದು ಉಪ
ನಯನ ಸಂಸ್ಕಾರ. ಇದು ಬೇರೆ ಬೇರೆ ಕರ್ಮಗಳನ್ನು ಅನುಷ್ಠಾನ ಮಾಡಲು
ಅಧಿಕಾರವನ್ನು ಸಂಪಾದಿಸಿ ಕೊಡುತ್ತದೆ. ಅಂದರೆ ಉಪನಯನ ಸಂಸ್ಕಾರವು
ವೇದಾಧ್ಯಯನ ಮಾಡಲು ಅಧಿಕಾರವನ್ನು ನೀಡುವುದು. ಶ್ರುತಿಯು ಉಪನ
ಯನವನ್ನು ಹೇಳಿ ಆ ಉಪನಯನ ಸಂಸ್ಕಾರವಿರುವವನಿಗೆ ಅಧ್ಯಯನ ಮಾಡಿಸ
ಬೇಕೆಂದು ಹೇಳುತ್ತದೆ. "ಅಷ್ಟವರ್ಷಂ ಬ್ರಾಹ್ಮಣಂ ಉಪನಯೀತ ತಮಧ್ಯಾ
ಪಯೀತ". ಎರಡನೆಯದು ಜಾತಕರ್ಮಾದಿ ಸಂಸ್ಕಾರ. ಇದು ಬೀಜ ಮತ್ತು
ಗರ್ಭಗಳ ದೋಷ(ಪಾಪ)ವನ್ನು ಪರಿಹರಿಸುತ್ತದೆ ಮತ್ತು ದುರಿತವನ್ನು
ದೂರಮಾಡುವ ಮೂಲಕ ಶರೀರವನ್ನೂ ಶುದ್ಧೀಕರಿಸಿ ಇಹ ಪರ ಸಾಧನವಾದ
ಕರ್ಮದಲ್ಲಿ ಅಧಿಕಾರವನ್ನು ಸಂಪಾದಿಸಿಕೊಟ್ಟು ಸುಖವನ್ನುಂಟು ಮಾಡುತ್ತದೆ.
ಈ ಸಂಸ್ಕಾರಗಳನ್ನು ಬ್ರಾಹ್ಮ ಮತ್ತು ದೈವ ಎಂದು ಎರಡು ವಿಧವಾಗಿ
ವಿಂಗಡಿಸಿದ್ದಾರೆ. ಬ್ರಾಹ್ಮ ಎಂದರೆ ಗರ್ಭಾಧನವೇ ಮೊದಲಾದ ಹದಿನಾರು
ಸಂಸ್ಕಾರಗಳು. ದೈವ ಎಂದರೆ ಪಾಕ ಯಜ್ಞ, ಹವಿರ್ಯಜ್ಞ, ಸೋಮಯಜ್ಞ
ಗಳು. ಈ ಸಂಸ್ಕಾರಗಳ ಸಂಖ್ಯೆಯಲ್ಲಿ ಮತಭೇದವಿದೆ. ಗೌತಮರು ಸಂಸ್ಕಾರ
ಗಳು ನಲವತ್ತು ಎನ್ನುತ್ತಾರೆ. ಈ ಸಂಸ್ಕಾರಗಳು ಇಹ ಪರಲೋಕಗಳ
ಸಾಧನೆಗೆ ಅನುಕೂಲವಾದ್ದರಿಂದ ಇವು ಎಲ್ಲ ವರ್ಣಾಶ್ರಮದವರಿಗೂ ಅವಶ್ಯಕ.
ಅದರಲ್ಲಿ ಬ್ರಾಹ್ಮಣನಿಗೆ ಈ ಸಂಸ್ಕಾರವು ಬ್ರಾಹ್ಮಣ್ಯವನ್ನು ನೀಡುತ್ತದೆ. ಇವು
ಗಳಿಲ್ಲದಿದ್ದರೆ ಬ್ರಾಹ್ಮಣ್ಯವೇ ಸಿದ್ಧಿಸುವುದಿಲ್ಲ ಎಂದು ಆಂಗೀರಸರ ಮತ. ಈ
ಬ್ರಾಹ್ಮ ಸಂಸ್ಕಾರಗಳಿಗೆ ಹಾರೀತರು ದೇವತೆಗಳ ಸಾಯುಜ್ಯ, ಸಾಲೋಕ್ಯ
ಸಾಮಾನ್ಯತೆ ಮತ್ತು ಸಮಾನತೆಗಳು ಫಲವೆಂದು ಹೇಳಿದ್ದಾರೆ. ಇಲ್ಲಿ
ಸಾಯುಜ್ಯವೆಂದರೆ ಸಮಾನ ಶರೀರವನ್ನು ಪಡೆಯುವಿಕೆ. ಸಾಲೋಕ್ಯವೆಂದರೆ
ಒಂದೇ ಲೋಕದಲ್ಲಿ ವಾಸಮಾಡುವಿಕೆ. ಸಾಮಾನ್ಯತೆಯೆಂದರೆ ಸಮಾನ ರೂಪ
ಪಡೆಯುವಿಕೆ. ಸಮಾನತೆಯೆಂದರೆ ಸಮಾನವಾದ ಪುರಸ್ಕಾರವನ್ನು ಪಡೆ

ಯುವಿಕೆ. ಮನುವೂ ಕೂಡ ಈ ಸಂಸ್ಕಾರಗಳಿಂದ ದೇಹ ಮತ್ತು ಆತ್ಮಕ್ಕೆ ಸಂಸ್ಕಾರವಾಗಿ ಬ್ರಹ್ಮಜ್ಞಾನದಲ್ಲಿ ಅಧಿಕಾರ ಸಿದ್ಧಿಸುತ್ತದೆ ಎಂದಿದ್ದಾರೆ.

**ಸ್ವಾಧ್ಯಾಯೇನ ವ್ರತೈಃ ಹೋಮೈಃ ತ್ರೈವಿದ್ಯೇನೇಜ್ಯಯಾ ಸುತೈಃ**
**ಮಹಾಯಜ್ಞೈಶ್ಚ ಯಜ್ಞೈಶ್ಚ ಬ್ರಾಹ್ಮೀಯಂ ಕ್ರಿಯತೇ ತನುಃ**

ಈ ಸಂಸ್ಕಾರಗಳಾಗದಿದ್ದರೆ ಅದರ ಫಲಗಳನ್ನು ಪಡೆಯಲಾರ. ಬೀಜಗಳು ಚೆನ್ನಾಗಿದ್ದರೂ ಒಗರು ಭೂಮಿಯಲ್ಲಿ ಬಿತ್ತಿದರೆ ಅಂಕುರವೂ ಹುಟ್ಟಲಾರದಷ್ಟೆ. ಗೌತಮರು ಮಾತ್ರ 'ಈ ಎಲ್ಲ ಸಂಸ್ಕಾರಗಳಿಲ್ಲದಿದ್ದರೂ ಹಿಂದೆ ಹೇಳಿದ ದಯಾ ಮೊದಲಾದ ಎಂಟು ಸಾಧಾರಣ ಗುಣಗಳಿದ್ದರೂ ಸಾಕು, ಸಾಯುಜ್ಯ ದೊರೆಯುತ್ತದೆ; ದಯಾದಿ ಗುಣಗಳಿಲ್ಲದಿದ್ದರೆ ಈ ನಲವತ್ತು ಸಂಸ್ಕಾರಗಳಿದ್ದರೂ ಬ್ರಹ್ಮನ ಸಾಯುಜ್ಯ ಸಾಲೋಕ್ಯವನ್ನು ಪಡೆಯಲಾರ' ಎಂದಿದ್ದಾರೆ. ಆದರೆ ಇದರ ಸರಿಯಾದ ಅರ್ಥವನ್ನು ತಿಳಿಯದೆ ಕೆಲವರು ಸಂಸ್ಕಾರಗಳ ಆವಶ್ಯಕತೆ ಯಿಲ್ಲ ಎಂದು ಅಭಿಪ್ರಾಯ ಪಡುವರು. ಇದು ಸೂತ್ರಕಾರರ ಇಂಗಿತವನ್ನು ಅರಿಯದೆ ಹೇಳುವವರ ದುಡುಕಿನ ಕ್ರಮವೆಂದು ಹೇಳಲೇಬೇಕಾಗಿದೆ. ದಯಾದಿ ಗುಣಗಳಿಲ್ಲದಿದ್ದರೂ ಕೂಡ ಉಪನಯನಾದಿ ಕೆಲವು ಸಂಸ್ಕಾರಗಳಿಲ್ಲದಿದ್ದರೂ ಫಲಸಿದ್ಧಿಸಬೇಕಾದಿತು. ಇದನ್ನು ಒಪ್ಪಿಕೊಳ್ಳುವಂತಿಲ್ಲ. ಅನೇಕ ವಿಧಿಗಳಿಗೆ ವ್ಯರ್ಥತೆ ಉಂಟಾದೀತು. ಉಪನಯನಾದಿ ಸಂಸ್ಕಾರವಿಲ್ಲದಿದ್ದರೆ ಬ್ರಾಹ್ಮಣ್ಯವೇ ಸಿದ್ಧಿಸದಿರುವಾಗ ಐಹಿಕ, ಪಾರತ್ರಿಕ ಫಲವಾದರೂ ಹೇಗೆ ಸಿಕ್ಕೀತು. ಆದ್ದರಿಂದ ಈ ಮಾತು ದಯಾದಿ ಗುಣಗಳ ಪ್ರಶಂಸೆಗಾಗಿ ಹೊರಟಿವೆಯೋ ಹೊರತು ಸಂಸ್ಕಾರವನ್ನು ಅಲ್ಲಗಳೆಯಲು ಹೊರಟಿದ್ದು ಅಲ್ಲ. ಆದ್ದರಿಂದಲೇ ಗೌತಮರ ಇದನ್ನು ಸ್ಪಷ್ಟೀಕರಿಸಲು "ಸಂಸ್ಕಾರಾಣಾಂ ಏಕದೇಶೇಪಿ" ಎಂದು ಅಪಿಶಬ್ದ ವನ್ನು ಪ್ರಯೋಗಿಸಿದ್ದಾರೆ. ಧರ್ಮಶಾಸ್ತ್ರದಲ್ಲಿ ಬ್ರಹ್ಮಚರ್ಯಕ್ಕೆ ಕೊಟ್ಟಿರುವ ಸ್ಥಾನವನ್ನು ಇತರಯಾವುದಕ್ಕೂ ಕೊಟ್ಟಿಲ್ಲ. ಈ ಆಶ್ರಮದಲ್ಲಿ ವಿದ್ಯಾಭ್ಯಾಸವೇ ಮುಖ್ಯ. ವಿದ್ಯೆಯು ಗುರು ಶುಶ್ರೂಷೆಯಿಂದಲೇ ದೊರೆಯುತ್ತದೆ. ಗುರುವಿನ ಅನುಮತಿಯಿಲ್ಲದೆ ಯಾವ ಕಾರ್ಯವನ್ನೂ ಮಾಡಬಾರದು. ಗುರುವಿನ ಮೇಲೆ ಅಪವಾದವನ್ನು ಹೇಳುವುದಿರಲಿ, ಅದನ್ನು ಕಿವಿಯಿಂದಲೂ ಕೇಳಬಾರದು. ಕೇವಲ ಪುಸ್ತಕ ಪಾಠವು ಯೋಗ್ಯವಲ್ಲ. ಗುರುಮುಖದಿಂದಲೇ ಅಭ್ಯಾಸ

ಮಾಡಬೇಕು, ಗುರುವನ್ನು ದೇವರಂತೆ ಭಾವಿಸಬೇಕು. ಇತ್ಯಾದಿ ಶಿಷ್ಯನ ಧರ್ಮವನ್ನು ಹೇಳುವ ಜೊತೆಗೆ ಗುರುವಿನ ಕರ್ತವ್ಯವನ್ನೂ ತಿಳಿಸಿದ್ದಾರೆ. ಶಿಷ್ಯನನ್ನು ಶಿಕ್ಷಿಸಬೇಕಾದಾಗ ಬೆನ್ನಿಗೆ ಮಾತ್ರ ಹೊಡೆಯಬೇಕು. ಚಿಕ್ಕ ಬೆತ್ತ ಮಾತ್ರ ಉಪಯೋಗಿಸಬೇಕು. ಮಿತಿ ಮೀರಿ ತಲೆಗೆ ಹೊಡೆದರೆ ಅಥವಾ ಬೆತ್ತದ ಹೊರತು ಬೇರೆ ಕೋಲುಗಳಿಂದ ಹೊಡೆದರೆ ಕಳ್ಳತನದ ದೋಷಕ್ಕೆ ಭಾಗಿಯಾಗುತ್ತಾನೆ. ಮತ್ತು ರಾಜದಂಡಕ್ಕೂ ಗುರಿಯಾಗುತ್ತಾನೆ. ಯೋಗ್ಯ ನಾದ ವಿದ್ಯಾರ್ಥಿಗೆ ವಿದ್ಯಾದಾನ ಮಾಡದಿದ್ದರೆ ಗುರುವು ದೋಷಿಯಾಗುತ್ತಾನೆ ಎನ್ನುತ್ತದೆ ಧರ್ಮಶಾಸ್ತ್ರ ಇನ್ನೊಂದು ವಿಷಯವನ್ನು ಧರ್ಮಶಾಸ್ತ್ರದಲ್ಲಿ ಗಮನಿಸಬೇಕಾಗಿದೆ. ವಿದ್ಯಾಭ್ಯಾಸವನ್ನು ಮುಗಿಸಿ ಶಿಷ್ಯನು ಮನೆಗೆ ಹೊರ ಟಾಗ ಹಿಂದೆ ಉಪದೇಶ ಮಾಡಿದ ಧರ್ಮದ ಸಾರವನ್ನು ಮತ್ತೊಮ್ಮೆ ಉಪ ದೇಶಿಸಿ ಬೀಳ್ಕೊಡುವ ದೃಶ್ಯ ಎಂಥವನ ಹೃದಯವನ್ನಾದರೂ ಕಲಕೀತು. "ಮಾತೃ ದೇವೋ ಭವ, ಪಿತೃದೇವೋ ಭವ, ಆಚಾರ್ಯ ದೇವೋ ಭವ, ಅತಿಥಿ ದೇವೋ ಭವ" ಇವೇ ಮೊದಲಾದವುಗಳ ಅರ್ಥವನ್ನು ಗಮನಿಸಿದರೆ ಭಾರತೀ ಯರ ಹಿರಿಮೆ ವೇದ್ಯವಾದೀತು. ತಾಯಿ-ತಂದೆ, ಆಚಾರ್ಯ, ಅತಿಥಿ ಇವರನ್ನು ದೇವರೆಂದು ತಿಳಿ, ಹಿರಿಯರ ನಡತೆಯನ್ನು ಮೀರಬೇಡ, ದಾನಮಾಡುವಾಗ ಶ್ರದ್ಧಾ ಭಯ ಇವುಗಳಿಂದ ದಾನ ಮಾಡು, ಧರ್ಮ ಸಂಶಯ ಬಂದಾಗ ಜ್ಞಾನಿ ಗಳ ಮಾರ್ಗವನ್ನು ಅನುಸರಿಸು. ಇಲ್ಲಿ ತಾಯಿಗೆ ಕೊಟ್ಟ ಪ್ರಥಮ ಸ್ಥಾನ ವನ್ನು ಸ್ಮೃತಿಗಳೂ ಒಪ್ಪಿಕೊಂಡಿವೆ. ಗುರುಹಿರಿಯರಲ್ಲಿ ಇಂತಹ ಗೌರವ ಭಾವ ಭಾರತೀಯರಲ್ಲಿ ಮಾತ್ರ ಕಾಣಬಹುದು. ಇವೆಲ್ಲವೂ ವರ್ಣ ಧರ್ಮ ಮತ್ತು ಆಶ್ರಮಧರ್ಮಗಳಲ್ಲಿ ಸೇರುತ್ತವೆ. ಅಭಿಷಿಕ್ತನಾದ ರಾಜನಿಗೆ ಕರ್ತವ್ಯ ವನ್ನು ಬೋಧಿಸುವ ಧರ್ಮ ಗುಣಧರ್ಮ. ಇವುಗಳಲ್ಲಿ ಸಕಲ ವಿಧವಾದ ವ್ಯವ ಹಾರವು ಅಡಕವಾಗಿದೆ. ಪ್ರತಿದಿನವೂ ಒದಗುವ ವಿವಾದಗಳ ಪರಿಹಾರೋ ಪಾಯಗಳು ನ್ಯಾಯಾಧಿಪತಿ ಮತ್ತು ಸಾಕ್ಷಿಗಳ ಕರ್ತವ್ಯ ಇವೆಲ್ಲವೂ ಇಲ್ಲಿ ವಿಶೇಷ ರೀತಿಯಲ್ಲಿ ನಿರೂಪಿಸಲ್ಪಟ್ಟಿವೆ. ನ್ಯಾಯ ತೀರ್ಮಾನದಲ್ಲಿ ಮಾನುಷ ಮತ್ತು ದೈವ ಎಂದು ಎರಡು ವಿಧ. ಮಾನುಷ ಪ್ರಮಾಣದಿಂದ ನಿರ್ಣಯಿಸಲು ಅಶಕ್ಯವಾದಾಗ ದೈವ ಪ್ರಮಾಣಗಳನ್ನು ಉಪಯೋಗಿಸಲು ಹೇಳಿದ್ದಾರೆ. ಈ ವ್ಯವಹಾರ ಧರ್ಮಗಳನಿಟ್ಟುಕೊಂಡೇ ಹಿಂದೆ ನ್ಯಾಯ ನಿರ್ಣಯ ಮಾಡು

ತ್ತಿದ್ದರು. ಯಾಜ್ಞವಲ್ಕ್ಯ ಸ್ಮೃತಿಯ ವ್ಯವಹಾರ ಕಾಂಡದ ಮಿತಾಕ್ಷರವು ಪ್ರಮುಖ ಪ್ರಮಾಣವೆಂದು ಗಣಿಸಲ್ಪಡುತ್ತಿತ್ತು. ಶಾಸ್ತ್ರವಿಹಿತವಾದ ಧರ್ಮಗಳಲ್ಲಿ ಲೋಪ ಬಂದಾಗ, ಅಕಾರ್ಯವನ್ನು ಮಾಡಿದಾಗ ಉಂಟಾದ ಪಾಪಗಳ ಪರಿಹಾರಕ್ಕಾಗಿ ವಿಧಿಸುವ ಧರ್ಮ ನಿಮಿತ್ತಧರ್ಮ, ಬ್ರಹ್ಮಹತ್ಯಾದಿ ಮಹಾ ಪಾಪಗಳು, ಗೋವಧೆ ಮುಂತಾದ ಉಪಪಾತಕಗಳು ಹಾಗೆಯೇ ಪಾತಕ, ಅತಿಪಾತಕ, ಲಘುಪಾತಕ, ಸಂಕಲೀಕರಣ, ಮಲಿನೀಕರಣ, ಜಾತಿ ಭ್ರಂಶಕರ, ಅನುಪಾತಕ, ಅಪಾತ್ರೀಕರಣ, ಪ್ರಕೀರ್ಣ ಮೊದಲಾದ ಪಾಪಗಳನ್ನು ತಿಳಿಸಿ ಇವುಗಳಿಗೆ ವಿವಿಧವಾದ ಪ್ರಾಯಶ್ಚಿತ್ತಗಳನ್ನು ವಿಧಿಸಲಾಗಿದೆ. ಪ್ರಾಯಶ್ಚಿತ್ತವೆಂದರೆ ವ್ರತಾನುಷ್ಠಾನ, ತಪಸ್ಸು ಇವೆರಡರ ಮೇಳನ. ಇಂತಹ ಪಾಪ ಮಾಡಿ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೆ ಪಾಪಿಗಳು ಜನ್ಮಾಂತರದಲ್ಲಿ ಅಂಗ ಹೀನರಾಗಿ ಹುಟ್ಟುತ್ತಾರೆ ಎನ್ನುವುದು ಮನುವಿನ ಮತ. ರೌರವ, ಕುಂಭೀ ಪಾಕ ಮೊದಲಾದ ನರಕಗಳ ದುಃಖವನ್ನು ಅನುಭವಿಸಬೇಕಾಗುತ್ತದೆ ಎಂದಿದ್ದಾರೆ ಋಷಿಗಳು. ಧರ್ಮವು ವಿಶ್ವದ ಆಧಾರಸ್ತಂಭ. ಧರ್ಮದಿಂದಲೇ ಸಕಲ ಪುರುಷಾರ್ಥಗಳು ಸಿದ್ಧಿಸುತ್ತವೆ. ಧರ್ಮದಿಂದಲೇ ಪಾಪಪರಿಹಾರ. ಧರ್ಮಾನುಷ್ಠಾನ ಮಾರ್ಗಗಳನ್ನು ಎಲ್ಲರೂ ಅನುಸರಿಸಬೇಕು. ಧರ್ಮದಲ್ಲಿ ಎಲ್ಲವೂ ಅಡಗಿದೆ ಎನ್ನುತ್ತದೆ ಶ್ರುತಿ.

ಇಷ್ಟೆಲ್ಲಾ ವಿಚಾರ ಮಾಡಿದ ನಂತರ ಸ್ತ್ರೀ ಬಗ್ಗೆ ಧರ್ಮಶಾಸ್ತ್ರಕಾರರ ಅಭಿಪ್ರಾಯವನ್ನು ತಿಳಿಸದಿದ್ದರೆ ಅದೊಂದು ನ್ಯೂನತೆ ಎಂದು ಭಾವಿಸುವವರೂ ಇರಬಹುದು. ಇತರರು ಸ್ತ್ರೀಯ ಬಗ್ಗೆ ಏನೇ ಹೇಳಲಿ ಶಾಸ್ತ್ರಗಳ ಮೇಲೆ ಏನೇ ಅಪವಾದ ಹೇಳಲಿ ನಮ್ಮ ಪ್ರಾಚೀನರು ಮಾತ್ರ ಒಳ್ಳೆಯ ಗೌರವವನ್ನೇ ನೀಡಿದ್ದಾರೆ. "ಶ್ರಿಯಃ ಸ್ತ್ರಿಯಶ್ಚ ಗೇಹೇಷು ನ ವಿಶೇಷೋಸ್ತಿ ಕಶ್ಚನ" ಅಂದರೆ ಲಕ್ಷ್ಮಿಗೂ ಸ್ತ್ರೀಗೂ ಯಾವ ಭೇದವೂ ಇಲ್ಲ ಎಂಬುದು ಮನುವಿನ ಅಭಿಪ್ರಾಯ. ಹಾಗೆಯೇ ಹೆಣ್ಣುಮಕ್ಕಳು ಕಣ್ಣೀರು ಹಾಕಿದರೆ ಆ ಮನೆಗೇ ವಿಪತ್ತೆಂದು ಹೇಳಿದ್ದಾನೆ. ಮತ್ತೆ ಇದನ್ನು ವ್ಯಾಸರು ಸಮರ್ಥಿಸಿದ್ದಾರೆ. ಶ್ರೇಯಸ್ಸನ್ನು ಬಯಸುವ ಪುರುಷರು ಸ್ತ್ರೀಯನ್ನು ಲಾಲನೆ ಪಾಲನೆ ಮಾಡಿದರೆ ಅವರು ಲಕ್ಷ್ಮಿಯೆನಿಸುತ್ತಾರೆ ಎಂದಿದ್ದಾರೆ. ಆದರೆ ಸ್ತ್ರೀಯರಲ್ಲಿ ಒಳ್ಳೆಯವರೂ ಕೆಟ್ಟವರೂ ಇರುತ್ತಾರೆ. ಒಳ್ಳೆಯ ಸ್ತ್ರೀಯರು ಲೋಕ ಸಮ್ಮತರಾಗಿ ಲೋಕ

ಮಾತೆಯೆನಿಸಿಕೊಂಡು ಈ ಭೂಮಿಯನ್ನೇ ರಕ್ಷಿಸುತ್ತಾರೆ ಎಂದು ಕೊಂಡಾಡಿದ್ದಾರೆ.

**"ಉಭಯಂ ದೃಶ್ಯತೇ ತಾಸು ಸತತಂ ಸಾಧ್ವಸಾಧು ಚ**
**ಸ್ತ್ರೀಯಃ ಸಾಧ್ವ್ಯೋ ಮಹಾಭಾಗ ಸಂಮತಾ ಲೋಕಮಾತರಃ**
**ಧಾರಯಂತಿ ಮಹೀಂ ರಾಜನ್ ಇಮಾಂ ಸವನಕಾನನಾಮ್."**

ಸ್ತ್ರೀಯು ವೀರಜನನಿ ಎಂದು ಕೊಂಡಾಡುತ್ತದೆ ಶಾಸ್ತ್ರ. ಸ್ತ್ರೀಯು, ತಾಯಿ, ಹೆಂಡತಿ, ಮಗಳು ಸೋದರಿಯಾಗಿ ಪುರುಷರ ನಿಕಟ ಸಂಬಂಧದಲ್ಲಿ ಪ್ರವೇಶಿಸುತ್ತಾಳೆ. ತಾಯಿಗೆ ಸಮಾನವಾದ ಮತ್ತೊಂದು ವಸ್ತುವಿಲ್ಲ. ತಾಯಿಯೇ ದೇವತೆ ಎನ್ನುವುದು ವೇದಕಾಲದಿಂದಲೂ ನಡೆದು ಬಂದ ರೀತಿ. ಸ್ತ್ರೀಗೆ ಮನೆಯ ಸರ್ವಾಧಿಕಾರವನ್ನು ವಹಿಸುತ್ತದೆ ಶಾಸ್ತ್ರ. ಪತ್ನಿ ಪತಿಯ ಅಧೀನಳಲ್ಲ ಅವನ ಬಾಳಿನ ಗೆಳತಿ ಎನ್ನುವುದನ್ನು ಈ ಶ್ಲೋಕದಲ್ಲಿ ಕಾಣಬಹುದು. "ನಾಸ್ತಿ ಭಾರ್ಯಾ ಸಮಂ ಮಿತ್ರಂ ನರಸ್ಯಾರ್ತಸ್ಯ ಭೇಷಜಂ" ಹೀಗಿರುವಾಗ ಸ್ತ್ರೀ ವಿಷಯದಲ್ಲಿ ಭಾರತೀಯ ದರ್ಶನವು ಬಹಳ ಗೌರವವನ್ನು ತಾಳಿದೆ. ಆದರೆ ಶತ್ರುಗಳ ಆಕ್ರಮಣ ಕಾಲದಲ್ಲಿ ಇತರ ದುಷ್ಟರ ಸಹವಾಸದಿಂದ ಅವರ ನಡತೆಗೆ ಚ್ಯುತಿ ಬಾರದಿರಲೆಂದು "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂದು ಪುರುಷರಿಗೆ ರಕ್ಷಣೆಯ ಭಾರವನ್ನು ವಹಿಸಿದೆ. ಯಜ್ಞದಲ್ಲಿಯೂ ದಂಪತಿಗಳಿಗೆ ಸಮಾನ ಅಧಿಕಾರವೆಂದು ಬರತಕ್ಕ ಫಲದಲ್ಲಿ ಸ್ತ್ರೀಯು ಸಮಭಾಗಿನಿ ಎಂದು ವಿಧಿಸಿದೆ. ಹೀಗಿರುವಾಗ ಸ್ತ್ರೀ ವಿಚಾರದಲ್ಲಿ ಭಾರತೀಯ ದರ್ಶನದ ಮೇಲೆ ಮುಸುಕನ್ನು ಎಳೆಯಲು ಪ್ರಯತ್ನಿಸಲಾರರೆಂದು ಭಾವಿಸಬೇಕಾಗಿದೆ. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಎಲ್ಲಿ ಸ್ತ್ರೀಗೆ ಮಾನ್ಯತೆ ಇದೆಯೋ ಅಲ್ಲಿ ದೇವತೆಗಳು ವಾಸಿಸುತ್ತಾರೆ ಎಂದಿದ್ದಾರೆ-

## ಧರ್ಮದ ಫಲ

ಧರ್ಮವನ್ನಾಚರಿಸುವಾಗ ಎಷ್ಟೇ ಕಷ್ಟ ಬಂದರೂ ಪಾಪಿಗಳಿಗೆ ಬರುವ ದುಷ್ಫಲವನ್ನು ಗಮನಿಸಿ ಅಧರ್ಮದ ಕಡೆಗೆ ಮನ ಕೊಡಬಾರದು. ಆದರೆ ಕೆಲವರು ಅಧರ್ಮ ಮಾಡುತ್ತಿದ್ದರೂ ಉನ್ನತ ಸ್ಥಾನದಲ್ಲಿ ಸುಖವಾಗಿ ಇರು

ವುದನ್ನು ಗಮನಿಸಿದಾಗ ಧಾರ್ಮಿಕರ ಮನಸ್ಸು ಸಂದೇಹಗೊಂಡರೆ ಮನುವು ಸಮಾಧಾನ ಹೇಳುತ್ತಾನೆ. ಅಧರ್ಮಾಚರಣೆ ಮಾಡಿದರೆ ಹಸುವಿನಂತೆ ಕೂಡಲೇ ಫಲಕೊಡುವುದಿಲ್ಲ; ಭೂಮಿಯು ಕಾಲಾಂತರದಲ್ಲಿ ಫಲಕೊಡುವಂತೆ ಅಧರ್ಮದ ಫಲವು ಕಾಲಾಂತರದಲ್ಲಾದರೂ ಆಗಿಯೇ ಆಗುತ್ತದೆ. ಒಂದು ಪಕ್ಷ ಜನ್ಮಾಂತರದ ಪುಣ್ಯ ಪ್ರಭಾವದಿಂದ ತನಗೆ ಪಾಪದ ಫಲ ದೊರಕದಿದ್ದರೆ ತನ್ನ ಮಕ್ಕಳಿಗಾಗಲೀ ಮೊಮ್ಮಕ್ಕಳಿಗಾಗಲೀ ಪಾಪದ ಫಲ ಆಗಿಯೇ ಆಗುತ್ತದೆ ಎಂದಿದ್ದಾನೆ.

**"ಯದಿ ನಾತ್ಮನಿ ಪುತ್ರೇಷು ನ ಚೇತ್ ಪುತ್ರೇಷು ನಪ್ತೃಷು**
**ನತ್ವೇವ ತು ಕೃತೋಽಧರ್ಮಃ ಕರ್ತುರ್ಭವತಿ ನಿಷ್ಫಲಃ"**

ಹೀಗಿರುವಾಗ ಧಾರ್ಮಿಕರು ಈ ಬಗ್ಗಾಗಿ ಯೋಚಿಸಬೇಕಾಗಿಲ್ಲ.

"ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ । ಲೋಕೆ ಧರ್ಮಿಷ್ಠಂ ಪ್ರಜಾ ಉಪಸರ್ಪಂತಿ । ಧರ್ಮೇಣ ಪಾಪಮಪನುದತಿ ಧರ್ಮೇ ಸರ್ವಂ ಪ್ರತಿಷ್ಠಿತಂ । ತಸ್ಮಾತ್ ಧರ್ಮಂ ಪರಮಂ ವದಂತಿ। ಇತಿ" ಧರ್ಮವನ್ನು ಪಾಲಿಸುವುದರಿಂದ ಇಹದಲ್ಲಿ ಸುಖವನ್ನನುಭವಿಸಿ ಪರದಲ್ಲಿ ಸ್ವರ್ಗಾದಿ ಫಲಗಳನ್ನನುಭವಿಸಿ ಕರ್ಮ ಶೇಷದಿಂದ ಉತ್ತಮ ಜನ್ಮವನ್ನು ಪಡೆದು ಮಾನವನು ಪುನೀತನಾಗುವನು. ಹೀಗೆ ಧರ್ಮಶಾಸ್ತ್ರವು ಕಟ್ಟುಪಾಡುಗಳನ್ನು ನಿರೂಪಿಸುವುದರ ಮೂಲಕ ಪಾಪ ದಲ್ಲಿ ಭಯವನ್ನು, ಪುಣ್ಯದಲ್ಲಿ ಆಸಕ್ತಿಯನ್ನು ಜನತೆಯಲ್ಲಿ ಉಂಟುಮಾಡುವಲ್ಲಿ ಯಶಸ್ವಿಯಾಗಿದೆ. ಧರ್ಮವು ಆತ್ಮೋದ್ಧಾರದ ಹಿನ್ನಲೆ. ಇವೇ ಧರ್ಮ ಶಾಸ್ತ್ರದ ರಹಸ್ಯ (ಆತ್ಮಲಾಭಾತ್ ನ ಪರಂ ವಿದ್ಯತೇ) ಈ ಧರ್ಮವು ಪ್ರವೃತ್ತಿ ಧರ್ಮ ಮತ್ತು ನಿವೃತ್ತಿ ಧರ್ಮ ಎಂದು ಎರಡುಬಗೆ. ಕಾಮ್ಯಕರ್ಮದಿಂದ (ಪ್ರವೃತ್ತಿ ಧರ್ಮದಿಂದ) ಭೋಗವೂ ನಿವೃತ್ತಿ ಧರ್ಮದಿಂದ (ನಿಷ್ಕಾಮ ಕರ್ಮ ದಿಂದ) ಮೋಕ್ಷವೂ ಲಭಿಸುತ್ತವೆ.

## ಧರ್ಮಶಾಸ್ತ್ರ ಪ್ರಾಶಸ್ತ್ಯ

ನಮ್ಮಲ್ಲಿ ಹಲವು ದರ್ಶನಗಳಿದ್ದರೂ ಅವೆಲ್ಲಾ ವಿಚಾರ ಪರವಾದವು. ಧರ್ಮಶಾಸ್ತ್ರವು ಮಾತ್ರ ಅನುಷ್ಠಾನ ಪರವಾದುದು. ಇದೇ ಈ ದರ್ಶನದ

ವೈಶಿಷ್ಟ್ಯ. ಮಾನವ ಜೀವನದ ಸಮಸ್ತ ಆಗುಹೋಗುಗಳನ್ನೂ ಸಾಧಕ ಬಾಧಕಗಳನ್ನೂ ಆತ್ಮೀಯತೆಯಿಂದ ವಿಮರ್ಶಿಸಿ ಉತ್ತಮಮಾರ್ಗದ ಕಡೆಗೆ ಕೊಂಡೊಯ್ಯುವ ಜ್ಯೋತಿಯೇ ಧರ್ಮಶಾಸ್ತ್ರ.

**"ಸುದುರ್ಲಭಮಿದಂ ಪ್ರಾಪ್ಯ ಮಾನುಷ್ಯಮಿಹ ಯೋ ನರಃ ।**
**ಧರ್ಮಾವಮಂತಾ ಕಾಮಾತ್ಮಾ ಸ ಭವೇತ್ ಖಲು ವಂಚಕಃ ॥**

ಯಥೈವಾತ್ಮಾ ಪರಸ್ತದ್ವದ್ದ್ರಷ್ಟವ್ಯಃ ಸುಖಮಿಚ್ಛತಾ
ಸುಖದುಃಖಾನಿ ತುಲ್ಯಾನಿ ಯಥಾತ್ಮನಿ ತಥಾಪರೇ ॥

ನಾಧರ್ಮಶ್ಚರಿತೋ ಲೋಕೇ ಸದ್ಯಃ ಫಲತಿ ಗೌರಿವ ।
ಶನೈರಾವರ್ತಮಾನಸ್ತು ಕರ್ತುರ್ಮೂಲಾನಿ ಕೃಂತತಿ ॥

ಪ್ರವೃತ್ತಿ ಸಂಜ್ಞಕೇ ಧರ್ಮೆ ಫಲಮಭ್ಯುದಯೋ ಮತಂ ।
ನಿವೃತ್ತಿ ಸಂಜ್ಞಕೇ ಧರ್ಮೇ ಫಲಂ ನಿಶ್ರೇಯಸಂ ಮತಂ ॥

ಯಥೇಕ್ಷುಹೇತೋರಪಿ ಸೇಚಿತಂ ಪಯಃ
ತೃಣಾನಿ ವಲ್ಲೀರಪಿಚ ಪ್ರಸಿಂಚತಿ !
ತಥಾ ನರೋ ಧರ್ಮಪಥೇನ ಸಂಚರನ್
ಸುಖಂ ಚ ಕಾಮಾಂಶ್ಚ ವಸೂನಿ ಚಾಶ್ನುತೇ ॥

ಸೀದನ್ನಪಿ ನ ಧರ್ಮೇಣ ಮನೋಽಧರ್ಮೇ ನಿವೇಶಯೇತ್ ।
ಅಧಾರ್ಮಿಕಾಣಾಂ ಪಾಪಾನಾಮಾಶು ಪಶ್ಯನ್ ವಿಪರ್ಯಯಂ ॥



(ಜನನ—11-3-1928)

## ಚತುಶ್ಶಾಸ್ತ್ರ ವಿದ್ವಾನ್ K. ವಾಸುದೇವ ಸೋಮಯಾಜೀ

**ಧರ್ಮಶಾಸ್ತ್ರ ಪ್ರಾಧ್ಯಾಪಕರು, ಮಹಾರಾಜ ಸಂಸ್ಕೃತ ಮಹಾಪಾಠಶಾಲಾ**

**ಮೈಸೂರು**

ಶ್ರೀಯುತರು ಉಡುಪಿ ತಾಲ್ಲೂಕಿನ ಕೋಟ ಗ್ರಾಮಕ್ಕೆ ಸೇರಿದ ಚಿತ್ರಪಾಡಿಯಲ್ಲಿ ಷಟ್ಕರ್ಮನಿರತರಾದ ಬ್ರಹ್ಮಶ್ರೀ ನೃಸಿಂಹ ಸೋಮಯಾಜೀಯವರ ಜ್ಯೇಷ್ಠ ಪುತ್ರರು. ಇವರು ಗುರುಮುಖದಿಂದ ಸಂಪೂರ್ಣ ವೇದಾಭ್ಯಾಸ ಮುಗಿಸಿ 1947ರಿಂದ ಇದೇ ಮಹಾಪಾಠಶಾಲೆಯಲ್ಲಿ ಮೀಮಾಂಸಾ-ಸಾಹಿತ್ಯ-ಧರ್ಮಶಾಸ್ತ್ರಾಭ್ಯಾಸ ಮಾಡಿ ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ತರ್ಕವಿದ್ವತ್ ಮಧ್ಯಮ ಮುಗಿಸಿ ಬೆಂಗಳೂರು ಶಂಕರಮಠದಲ್ಲಿ ಸ್ವಲ್ಪಕಾಲ ವೇದಾಂತ ಅಭ್ಯಾಸಮಾಡಿ ವೇದಭಾಷ್ಯ-ಜ್ಯೌತಿಷದಲ್ಲೂ ಸಾಕಷ್ಟು ಅಭ್ಯಾಸಮಾಡಿದ್ದಾರೆ. 1958ರಿಂದ ಇದೇ ಪಾಠಶಾಲೆಯಲ್ಲಿ 'ಧರ್ಮಶಾಸ್ತ್ರ' ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. 1963ರಲ್ಲಿ ಇವರು ರಚಿಸಿದ "ಕ್ಷಯಮಾಸ ಮೀಮಾಂಸಾ" ಎನ್ನುವ ಉದ್ಗ್ರಂಥವನ್ನು ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳಿಂದಾರಂಭಿಸಿ ಕೆಲವರು ಮುಕ್ತಕಂಠದಿಂದ ಹೊಗಳಿದ್ದಾರೆ ಮತ್ತು 1974ರಲ್ಲಿ "ಶ್ರೀ ಗುರುನೃಸಿಂಹ ಸುಪ್ರಭಾತ"ವನ್ನೂ ರಚಿಸಿದ್ದಾರೆ. ಪ್ರಕೃತ ಇವರು ಸಂಪಾದಿಸಿದ "ಅನುಷ್ಠಾನ ಪದ್ಧತಿ" ಎಂಬ ಅಪೂರ್ವವಾದ ತಂತ್ರ ಗ್ರಂಥದ ಮುದ್ರಣಕಾರ್ಯ ಭರದಿಂದ ನಡೆಯುತ್ತಲಿದೆ.